International Journal of Kannada Research
www.kannadajournal.com

ISSN: 2454–5813
IJKR 2017; 3(4): 130-142
© 2017 IJKR
www.kannadajournal.com
Received: 22-08-2017
Accepted: 23-09-2017

ಡಾ. ಎನ್. ಆರ್ ಲಲಿತಾಂಬ
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಸಹಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ ಬೆಂಗಳೂರು

Correspondence
ಡಾ. ಎನ್. ಆರ್ ಲಲಿತಾಂಬ
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಸಹಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ ಬೆಂಗಳೂರು

# ಕರ್ನಾಟಕದ ವೀರಪಡೆಗಳ ಮೇಲೆ ಶ್ರೀವೈಷ್ಣವ ಹಾಗೂ ವೀರಶೈವ ಧರ್ಮದ ಪ್ರಭಾವ: ಮೌಲ್ಯಪಲ್ಲಟ

**ಡಾ. ಎನ್. ಆರ್ ಲಲಿತಾಂಬ**

ಕರ್ನಾಟಕವು ತನ್ನದೇ ಆದ ಅನನ್ಯ ಸಂಸ್ಕೃತಿ ಹಾಗೂ ಇತಿಹಾಸದ ಬುನಾದಿಯ ಮೇಲೆ ಭದ್ರವಾದ ಒಂದು ಸಾಮ್ರಾಜ್ಯವಾಗಿ ರೂಪಣೆಗೊಂಡಿರುವಲ್ಲಿ ಅದರ 'ರಕ್ಷಣಾ ವ್ಯವಸ್ಥೆ' ಪ್ರಮುಖವಾದದ್ದು. ನಿರಂತರವಾಗಿ ಈ ಸಂಪದ್ಭರಿತ ಭೂಮಿಯ ರಕ್ಷಣೆಯ ಹೊಣೆಹೊತ್ತ ವೀರ ಪರಂಪರೆಯೊಂದರ ಕೊಡುಗೆಯನ್ನು ಶಾಸನಗಳಲ್ಲಿ ನಮ್ಮ ನಾಡಿನ ಆಚರಣೆಗಳಲ್ಲಿ ಗುರುತಿಸಬಹುದು.

ಕ್ಷತ್ರಿಯವರ್ಗವು ಸಮಾಜದ ಹಾಗೂ ಆಡಳಿತ ಪಾಲನೆಯ ಜವಾಬ್ದಾರಿಯನ್ನು, ಸಾಮ್ರಾಜ್ಯ ನಿರ್ಮಾಣ ಹಾಗೂ ಅದರ ರಕ್ಷಣಾವ್ಯವಸ್ಥೆಯ ಹೊಣೆಯನ್ನು ಹೊತ್ತುಕೊಂಡಿತ್ತು. ಜೊತೆಗೆ ಯುದ್ಧಗಳನ್ನು ಸಾಮ್ರಾಜ್ಯ ವಿಸ್ತರಣೆಯನ್ನು ರಾಜ್ಯಾಡಳಿತದ ಒಂದು ಅವಿಭಾಜ್ಯ ಅಂಗವಾಗಿ ಮಾಡಿಕೊಂಡಿತ್ತು. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಸೈನ್ಯದಲ್ಲಿ ಶಸ್ತ್ರಾಸ್ತ್ರಗಳಲ್ಲಿ ಪರಿಣತರಾದ ಬಲಶಾಲಿಗಳಾದ ವೀರರ ಪಡೆಯೇ ಇರುತ್ತಿತ್ತು. ಯುದ್ಧವೆಂಬುದು ನಿರಂತರ, ಸಾರ್ವತ್ರಿಕ ಎಂಬಂತೆ ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತಲೇ ಇದ್ದು, ಇಂತಹ ವೀರರಿಗೆ ಸದಾ ಬೇಡಿಕೆ ಇರುತ್ತಿತ್ತು. ಅಲ್ಲದೆ ಸೈನ್ಯವೆಂಬುದು ಒಂದು ದೊಡ್ಡ ಉದ್ಯೋಗಾವಕಾಶವನ್ನು ಒದಗಿಸುತ್ತಿದ್ದ ವ್ಯವಸ್ಥೆಯಾಗಿತ್ತು.

ನಿಷ್ಠೆ, ಶಸ್ತ್ರಾಸ್ತ್ರ ನೈಪುಣ್ಯತೆ, ಶೌರ್ಯಗಳೇ ಅರ್ಹತೆಗಳಾಗಿ, ಆರೋಗ್ಯವಂತ ಯುವಕರಿಗೆ ಸೈನ್ಯದಲ್ಲಿ ಸದಾ ಅವಕಾಶವಿರುತ್ತಿತ್ತು. ಇಂತಹವರಿಗೆ ವಿಶೇಷ ತರಬೇತಿಯೂ ನಡೆಯುತ್ತಿತ್ತು. ಯುದ್ಧ ಪರಿಣತರಾದ, ರಣಸಾಹಸಿಗಳಾದ ಇಂಥ ಸ್ವಾಮಿನಿಷ್ಠರ ಸೇವೆಯೇ ಅರಸರ ನಿಜವಾದ ಬಲವಾಗಿತ್ತು. ಅವರ ಏಳು ಬೀಳುಗಳು ಇವರ ಸೇವೆಯ ಮೇಲೆ ನಿಂತಿತ್ತು. ಹಾಗಾಗಿ ಅರಸರು ಇಂತಹ ವೀರರನ್ನು ಸೈನ್ಯಗಳಲ್ಲಿ ನೇಮಿಸಿಕೊಂಡು ಸಂಬಳದ ರೂಪದಲ್ಲೋ, 'ಜೋಳ'ದ ರೂಪದಲ್ಲೋ ಉಂಬಳಿ, ಮೃಜೀವಿತಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದರು. ಸೈನ್ಯದ ವ್ಯೂಹ ರಚನೆಯಲ್ಲಿ ಅನೇಕ ಅಂಗರಕ್ಷಕರನ್ನು, ಮೇಲಾಳುಗಳನ್ನು, ಬಂಟರನ್ನು ಬಲುಮನುಷ್ಯರನ್ನು ಮುಂದಿಟ್ಟುಕೊಂಡು ಅವರ ಕಾಪಿನಲ್ಲಿ ಅರಸನನ್ನು ಕಾಪಾಡುವುದಕ್ಕಾಗಿ ವಿಶೇಷ ವ್ಯವಸ್ಥೆ ಮಾಡಲಾಗುತ್ತಿತ್ತು.

ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಶಾಸನಗಳನ್ನು ಗಮನಿಸಿದಾಗ ಶಸ್ತ್ರಾಸ್ತ್ರ ಪರಿಣತರಾದ ಬಲಶಾಲಿಗಳಾದ ಪದಾತಿ ಪಡೆಯೊಂದಿಗೆ ರಾಜರ ನೆಚ್ಚಿನ ಬಂಟರಾಗಿ ಪ್ರಾಮಾಣಿಕ ಹೋರಾಟಗಾರರಾಗಿ ವಿಶಿಷ್ಟವಾದ 'ವೀರಪಡೆ'ಗಳು ವೀರ ಕುಟುಂಬಗಳೂ ಇದ್ದು, ವೀರ ಪರಂಪರೆಯೊಂದರ ಅಸ್ತಿತ್ವಕ್ಕೆ ಕಾರಣರಾದುದು ಕಂಡುಬರುತ್ತದೆ. ಪ್ರಾಚೀನ ಕುಲಪುತ್ರ, ಪ್ರಿಯಪುತ್ರ, ವೇಳವಾಳಿ, ಜೋಳವಾಳಿ ಇತ್ಯಾದಿ ಹೆಸರುಗಳಿಂದ ಗುರುತಿಸಲ್ಪಟ್ಟ ಸ್ವಾಮಿನಿಷ್ಠ ವೀರರ ವೀರಪರಂಪರೆಯು ಮಧ್ಯಕಾಲೀನ ಕರ್ನಾಟಕದ ಹೊಯ್ಸಳರ ಕಾಲದಲ್ಲಿ ವಿಶೇಷವಾಗಿ ವಿಜೃಂಭಿಸಿದ್ದನ್ನು ಕಾಣುತ್ತೇವೆ. ಕಲ್ಯಾಣ ಚಾಲುಕ್ಯರ ಕಾಲದವರೆಗೆ ಬಳಕೆಗೊಂಡ 'ವೇಳೆವಾಳಿ' 'ಜೋಳವಾಳಿ' ಪಾರಿಭಾಷಿಕ ಪದಗಳಿಗೆ ಪರ್ಯಾಯವಾಗಿ ಕಲಚೂರಿ ಹೊಯ್ಸಳರ ಕಾಲಕ್ಕೆ 'ಗರುಡ' ಅಂಕ, ಲೆಂಕಯೆಂಬಿವು ಬಳಕೆಯಲ್ಲಿ ಬರತೊಡಗಿದವು.

ಪತಿ ಭಕ್ತರಾದ ವೀರರನ್ನು ಕೂಸ, ಪುತ್ರ, ಅಣುಗ, ಡಿಂಗರಿಗ, ಮಕ್ಕಳ್, ಬೆಸಮಕ್ಕಳ್, ಪ್ರಿಯಪುತ್ರ ಇತ್ಯಾದಿ ಪದಗಳಿಂದ ಶಾಸನಗಳು ಕರೆದಿವೆ. ವೀರ ವೃತ್ತಿಯೇ ಜೀವನಾಧಾರವಾದ ಕೆಲವು ವೀರರ ಪಡೆಗಳು ಅಥವಾ ಆಯುಧ ಜೀವಿಗಳು ಶಾಸನಗಳಲ್ಲಿ ಹಾಗೂ ಕನ್ನಡದ ವೀರ ಕಾವ್ಯಗಳಲ್ಲಿ

ಕಂಡುಬರುತ್ತಾರೆ. ಈಗಾಗಲೇ ವಿದ್ವಾಂಸರು ಗುರುತಿಸಿದ್ದ ವೇಳೆವಾಳಿ ಜೋಳವಾಳಿ ಲೆಂಕರು, ಗರುಡರು, ತುಳಿಲಸಂದರೆಂಬ ಹೆಸರಿನ ವೀರರಲ್ಲದೆ ಇತ್ತೀಚಿನ ನನ್ನ ಸಂಶೋಧನೆಯಲ್ಲಿ ಬೆಳಕಿಗೆ ಬಂದಿರುವ 'ಕೋಶರರ್ ಎಟ್ಬ್ತ್ತರ್' ಭೇರುಂಡನ ಮೊತ್ತದ ಕೂಸರ್', 'ಹುಲಿಯ ಜಂಗುಳಿಯ ಮೊತ್ತ' (ಬ್ಲ್ಯಾಕ್ ಕ್ಯಾಟ್ಸ್), 'ಎಕ್ಕಟಿಗರ್ ಅಂಗರಕ್ಕರ್', 'ಮೈಮೇಟ್ಟಿಗಳ್', ಮಾವಟಿಗರು ಪಟ್ಟದ ಇಭದಾರುಕರು, ಡಿಂಗರಿಗ ಚಳುಕೆಯನಾಯಕರು, ಜಟ್ಟಿಗಳಂತಹ ವಿಶಿಷ್ಟ ವೀರಪಡೆಗಳನ್ನು ಹಾಗೂ ವೀರವೃತ್ತಿಯ ಸಮುದಾಯಗಳು, ಅವರ ಕೆಲವು ಆಚರಣೆಗಳನ್ನು ವೀರಮೌಲ್ಯಗಳು, ವರ್ಣನೆಗಳು, ಕೊಡುಗೆಗಳು ವಿಶಿಷ್ಟವಾದವು. ಇಂತಹ ವೀರ ಪಡೆಗಳು ಹಾಗೂ ಸಮುದಾಯಗಳ ಮೇಲೆ ರಾಜಕೀಯ ಪ್ರಭುತ್ವ ಹಾಗೂ ಧಾರ್ಮಿಕ ಪ್ರಭುತ್ವಗಳು ಎಂತಹ ಪ್ರಭಾವವನ್ನು ಬೀರಿದ್ದವು. ಕಾಲದಿಂದ ಕಾಲಕ್ಕೆ ಬದಲಾದ ಬದುಕಿನ ಮೌಲ್ಯಗಳು ವೀರ ಕನ್ನಡಿಗರನ್ನು ಯಾವ ರೀತಿ ಪ್ರಭಾವಿಸಿವೆ ಎಂಬುದನ್ನು ಅರಿಯುವ ಪ್ರಯತ್ನವಿದಾಗಿದೆ.

ಕರ್ನಾಟಕವನ್ನು ವೀರರನಾಡೆಂದು ಸುಮ್ಮನೆ ಕವಿಗಳು ಕರೆದದ್ದಲ್ಲ. ಸಾವಿರಾರು ವೀರ ಸ್ಮಾರಕಗಳು ಶಾಸನಗಳು, ವೀರ ಕಾವ್ಯಗಳು ವಿಶಿಷ್ಟ ವೀರರ ಮಹಾಮರಣಗಳನ್ನು, ತ್ಯಾಗ–ಪರಾಕ್ರಮಗಳನ್ನು ತೆರೆದಿಟ್ಟಿರುವುದೇ ಇದಕ್ಕೆ ಸಾಕ್ಷಿ. ಕರ್ನಾಟಕದ ಉದ್ದಗಲಕ್ಕೂ ದೊರಕಿರುವ ಇಂತಹ ಸ್ಮಾರಕಗಳನ್ನು ಗಮನಿಸಿದಾಗ ನಮ್ಮ ಆಳರಸರ ಸೈನ್ಯದ ಬೆನ್ನೆಲುಬಾಗಿದ್ದ ವೀರರು, ವೀರಪಡೆಗಳು, ವೀರಕುಟುಂಬಗಳು ಕರ್ನಾಟಕದ ವೀರ ಪರಂಪರೆಯೊಂದನ್ನು ಜೀವಂತವಾಗಿ ಉಳಿಸಿ ಕರ್ನಾಟಕವನ್ನು ಕಾಪಾಡಿರುವುದು ಕಂಡುಬರುತ್ತವೆ. ವೀರಪರಂಪರೆಯೊಂದರ ಪ್ರತಿನಿಧಿಗಳಂತೆ ವಿಜಅರಸ, ಅರಭಟ್ಟ, ಗುಣಮಧುರ, ರೆಟ್ಟಿಯಣ್ಣ, ಶಂಬುಮುಂತಾದ ಅನೇಕ ವೀರರ ಉಲ್ಲೇಖಗಳು ಕಾಣಿಸಿಕೊಂಡಿವೆ. ಕ್ರಿ.ಶ.೩ನೇ ಶತಮಾನದಿಂದಲೇ ಕರ್ನಾಟಕದ 'ತುಳುನಾಡ ಕೋಶಿಗರ'ನ್ನು ಸಂಗಂ ಸಾಹಿತ್ಯದಲ್ಲಿ ವಿಶೇಷವಾಗಿ ಕೊಂಡಾಡಲಾಗಿದೆ. ತಗರೆನಾಡಿನ ತೊಳಲುಗ್ರಾಮದ ತೊಳಲ'ಕೋಶರರ್ ಎಟ್ಬ್ತ್ತರ್' ವೀರಪಡೆಯ ವೀರಮೌಲ್ಯಗಳು, 'ನರಶಾಸನ'ಗಳೆಂದು ಪ್ರಸಿದ್ಧರಾಗಿದ್ದ ಅವರ ಬದ್ಧತೆ, ವೀರನಿಷ್ಠೆಗಳನ್ನು, ರಕ್ಷಣೆಯ ಹೊಣೆಗಾರಿಕೆಗಳು ವಿಶೇಷ. [೧] ಮುಂದೆ ವೀರ ಸಿದ್ಧಾಂತವನ್ನು ಮೈಗೂಡಿಸಿಕೊಂಡು 'ತುಳಿಲಸಂಧಕುಲ' ದವರೆಂದು ಪ್ರಸಿದ್ಧರಾದ ವೀರಪಡೆಯನ್ನು ವಿದ್ವಾಂಸರು ತಿಳಿಸಿಕೊಟ್ಟಿದ್ದಾರೆ. ಮೊದಲ ಸಹಸ್ರಮಾನದ ಶಾಸನಗಳಲ್ಲಿ ಕಂಡು ಬಂದಿರುವ ಈ ಕೋಶರರು, ತುಳಿಲಸಂದರ ವೀರಪಡೆಗಳೊಂದಿಗೆ ಪ್ರೇಮಾಲಯಸುತರು, ಕುಲಪುತ್ರ, ಪ್ರಿಯಪುತ್ರ, ವೇಳೆವಾಳಿ, ಜೋಳವಾಳಿ, ಇತ್ಯಾದಿ ಹೆಸರುಗಳಿಂದ ಪ್ರಸಿದ್ಧರಾದ ಅನೇಕ ಖಾಸಾವೀರರ ವೀರಜೀವನವನ್ನು ಶಾಸನಗಳು ತೆರೆದಿಟ್ಟಿವೆ. ಕ್ರಿ.ಶ.೮೬೪ರಲ್ಲೇ ಅರಸರಿಗೆ ವೇಳೆ ಗೊಳ್ಳುವ ಪದ್ಧತಿ ಚಾಲ್ತಿಯಲ್ಲಿತ್ತು. ವೀರಮರಣ ವೀರಸ್ವರ್ಗ, ಪುಣ್ಯ ಪ್ರಾಪ್ತಿಗಳ ಪರಿಕಲ್ಪನೆಗಳು, ನಂಬಿಕೆಗಳು ಬಲವಾಗಿ ಬೇರೂರಿದ ವೀರಪರಂಪರೆಯೊಂದು ಸೃಷ್ಟಿಯಾಗಿತ್ತು. ಯುದ್ಧಗಳಲ್ಲಿ ಭಾಗವಹಿಸಿ ಜಯವನ್ನು ತರುವುದು ಇಲ್ಲವೇ ವೀರಸ್ವರ್ಗವನ್ನು ಸೇರಿ ಸುಖಿಸುವುದು ವೀರನ ಮುಂದಿದ್ದ ಪ್ರಬಲವಾದ ಆಕರ್ಷಣೆಯಾಗಿತ್ತು. ಲೌಕಿಕ ಬದುಕಿನಲ್ಲಿ ವೀರನಿಗೆ, ಅವನ ಕುಟುಂಬಕ್ಕೆ ದೊರಕುತ್ತಿದ್ದ ಸೌಲಭ್ಯಗಳು, ಸ್ಥಾನಮಾನ, ಕೀರ್ತಿಯ ಆಕರ್ಷಣೆ ಒಂದು ಕಡೆಯಾದರೆ, ಕ್ಷಣ ವಿಧ್ವಂಸಿಯಾದ ಈ ದೇಹಕ್ಕೆ ಆಸೆ ಪಡದೆ, ಶಾಶ್ವತ ಸುಖದಲ್ಲಿ ನಿಲ್ಲುವ ಅಲೌಕಿಕ ಸೆಳೆತ ಮತ್ತೊಂದೆಡೆ ಈ ವೀರ ಪರಂಪರೆಗೆ ಪ್ರೇರಣೆಯಾಗಿತ್ತು.

ವೀರರು ನಂಬಿ ನಡೆದ, ಪ್ರಭುತ್ವ ಪೋಷಿತ ಇಂಥ ಮೌಲ್ಯಗಳು ಜನಮನ್ನಣೆಯನ್ನು ಪಡೆದಿದ್ದವು. ಅವು ಸಾರ್ವತ್ರಿಕವಾಗಿ ಯಾವುದೇ ಪುರುಷನನ್ನು ಆಕರ್ಷಿಸುವುದರೊಂದಿಗೆ, ಆಳರಸರಿಗೆ ಬಂಟರಾಗಿ ಸೇವೆಸಲ್ಲಿಸಲು ಉತ್ತೇಜಿಸುತ್ತಿದ್ದವು. ಇಂತಹ ಸಮರ್ಪಣಾಭಾವ, ಸೇವಾಕೈಂಕರ್ಯದ ಹಿಂದೆ ಸಾವಿನ ನಂತರದಲ್ಲೂ ಇರುವ ವೀರಸ್ವರ್ಗದ ಕಲ್ಪನೆ ಮತ್ತು ಋಣದ ಸಂದಾಯದ ಕಲ್ಪನೆ ಪ್ರಧಾನಮೌಲ್ಯವಾಗಿತ್ತು. ಪ್ರಭುತ್ವ ದೈವೀಕವೆನಿಸಿದ್ದು, ರಾಜ ಪ್ರತ್ಯಕ್ಷದೈವವೆಂಬ ನಂಬಿಕೆಯನ್ನು ಬಿತ್ತಿ ಬಂಟರನ್ನು, ಸೇವಕವರ್ಗವನ್ನು ಹುಟ್ಟುಹಾಕಿತ್ತು. ತನ್ನ ಬದುಕು ಒಡೆಯನಿಗೆ ಮೀಸಲಾಗಿರಬೇಕೆಂಬ ನಿಷ್ಠೆ, ಕೃತಜ್ಞತೆ, ಅದೀನತೆಗಳು ಪುರಸ್ಕರಿಸಲ್ಪಡುತ್ತಿದ್ದವು.

ಹತ್ತನೆಯ ಶತಮಾನದಕೊನೆ ಹನ್ನೊಂದನೆಯ ಶತಮಾನದ ಆರಂಭದ ಹೊತ್ತಿಗೆ ದಕ್ಷಿಣಕರ್ನಾಟಕದ ನೆಲದಲ್ಲಿ ಹೊಯ್ಸಳರು ಪ್ರಬಲರಾಗಿ ಬೆಳೆಯತೊಡಗಿದರು. ಹೊಯ್ಸಳರು ಉತ್ತರದ ಕಲ್ಯಾಣ ಚಾಲುಕ್ಯರ ಆದಿಪತ್ಯ, ದಕ್ಷಿಣದಲ್ಲಿ ಚೋಳರ ಮಧ್ಯೆ ಸಿಕ್ಕಿಕೊಂಡಿದ್ದರು. ಸ್ವತಂತ್ರರಾಜರಾಗಿ ಆಳುವ ಅವರ ಕನಸು ನನಸಾಗಬೇಕಾದರೆ ಅವರ ಸೈನ್ಯ ಬಲ ಹೆಚ್ಚಬೇಕಿತ್ತು ಅದಕ್ಕೆ ಅವಶ್ಯಕವಾದ ನಿಷ್ಠಾವಂತ ಸಾಮಂತರು ಎರವೆಸನಕ್ಕೆ ಮೀಸಲಾದ ವೀರಪಡೆಗಳ ಅನಿವಾರ್ಯತೆಯನ್ನು ಅವರು ಚೆನ್ನಾಗಿ ಮನಗಂಡಿದ್ದರು.

೧೨ನೇ ಶತಮಾನದ ಹೊತ್ತಿಗೆ ಕರ್ನಾಟಕದ ಸಾಂಸ್ಕೃತಿಕ ಜಗತ್ತಿನಲ್ಲಾದ ಸಂಚಲನವು ಹೊಸ ಮೌಲ್ಯಗಳ ಹುಟ್ಟುವಿಕೆಗೆ ಕಾರಣವಾಯಿತು. ಕ್ಷಾತ್ರಮೌಲ್ಯಗಳು ಮಂಕಾಗತೊಡಗಿತು. ವೀರರನ್ನು ಕೈಹಿಡಿದು ನಡೆಸಿದ್ದ, ನಂಬಿದ್ದ ಮೌಲ್ಯಗಳ ಬುಡವನ್ನೇ ಅಲ್ಲಾಡಿಸತೊಡಗಿತ್ತು. ವಚನಗಳಲ್ಲಿ ಮತ್ತು ಭಕ್ತಿ ಪ್ರಧಾನವಾದ ಕಾವ್ಯಗಳಲ್ಲಿ ಜೋಳವಾಳಿ, ವೇಳೆವಾಳಿ, ಎಕ್ಕಟಿಗವೀರರ ಬಗೆಗೆ ತಿರಸ್ಕಾರದ, ಅಸಡ್ಡೆಯ, ಅನುಕಂಪದ ಮಾತುಗಳು ಕೇಳಿಬರುತ್ತಿದ್ದವು.

ಇಂತಹ ವೀರ ಪರಾಕ್ರಮಗಳು ಸಾತ್ವಿಕ ಶಕ್ತಿಯಮುಂದೆ, ಭಕ್ತನ ಮುಂದೆ ಸೋತು ಸತ್ವಕಳೆದುಕೊಳ್ಳುವಂತೆ ಚಿತ್ರಣವಾಗಿರುವುದನ್ನು ಭಕ್ತಿ ಕಾವ್ಯಗಳಲ್ಲಿ ಕಾಣಬಹುದು. 'ನನ್ನ ನಾಲಗೆಯನ್ನು ವಿರೂಪಕ್ಷನಿಗಲ್ಲದೆ ಅನ್ಯರಿಗೆ ನೀಡುವುದಿಲ್ಲ'ವೆಂಬ ಹರಿಹರನ ಪ್ರಭುತ್ವವಿರೋಧಿ ನಿಲುವಂತೂ ಹೊಯ್ಸಳರ ಊಳಿಗದಲ್ಲಿದ್ದು, ಅರಸರಿಗೆ ಭಾಷೆ(ನಾಲಗೆ)ಕೊಟ್ಟು ತಮ್ಮ ಸ್ವಾತಂತ್ರ್ಯವನ್ನೇ ಕಳೆದುಕೊಂಡಿದ್ದಂತಹ, ಆ ಮಾತನ್ನು ಉಳಿಸಿಕೊಳ್ಳಲು ತಮ್ಮ ಬದುಕು, ಇಡೀ ಕುಟುಂಬಗಳನ್ನೇ ಅರಸರಿಗೆ ಒತ್ತೆಯಿಟ್ಟಿದ್ದ ಗರುಡರು, ಲೆಂಕರು, ಕೂಸರಂಥ ಅರಸರ ಊಳಿಗಕ್ಕೆ ನಿಂತವೀರರ ವಿಡಂಬನೆಯೇನೋ ಎನಿಸುತ್ತದೆ. ಆದರೆ ದಕ್ಷಿಣ ಕರ್ನಾಟಕದ ಹೊಯ್ಸಳರ ಶಾಸನಗಳನ್ನು ಗಮನಿಸಿದಾಗ ವೀರಮೌಲ್ಯಗಳು ಕುಸಿಯದಂತೆ, ವೀರಪಡೆಗಳು ಗೊಂದಲಕ್ಕೆ ಒಳಗಾಗದಂತೆ ಅವರಲ್ಲಿ ಸೇವೆ ಭಕ್ತಿ, ಪ್ರಪತ್ತಿಗಳನ್ನು ಏಕೀಭವಿಸಿ ಸಕ್ಷಾತ್ ವಿಷ್ಣುಸ್ವರೂಪಿಯಾದ ಅರಸನಿಗೆ ಗರುಡ–ಹನುಮರಂತೆ ತಮ್ಮ ಬದುಕನ್ನೇ ಮುಡಿಪುಮಾಡುವ ಹೊಸ ಚಿಂತನೆಯ ಅಲೆಯೊಂದು ತೀವ್ರವಾಗಿ ಹೊಯ್ಸಳ ವಿಷ್ಣುವರ್ಧನನ ಕಾಲದಿಂದಲೇ ಹರಿದಾಡತೊಡಗಿದ್ದುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಕಲ್ಯಾಣ ಕರ್ನಾಟಕದಲ್ಲಿ ಶಿವಶರಣರಿಂದ ಮೌಲ್ಯ ಬದಲಾವಣೆಯಾಗುತ್ತಿದ್ದ ಕಾಲದಲ್ಲೇ ದಕ್ಷಿಣದಲ್ಲಿ ಶ್ರೀವೈಷ್ಣವ ಧರ್ಮ ರಾಜಮಾನ್ಯತೆ ಪಡೆದಿತ್ತು. ಹಾಗಾಗಿ ಅದು ಪ್ರಭುತ್ವದ ವಿರುದ್ಧವಾಗಿ ಏನನ್ನೂ ಹೇಳದೆ. ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನನ್ನೂ ದೊರೆಯನ್ನು ಏಕೀಭವಿಸತೊಡಗಿತು.

ರಾಮಾನುಜರು ಭಗವಂತನಿಗೆ ಸಂಪೂರ್ಣ ಶರಣಾಗುವ

ಪ್ರಪತ್ತಿಯಿಂದ ಮುಕ್ತಿ ಎಂಬುದನ್ನೂ, ಸೇವೆಗಿರುವ ಪ್ರಾಧಾನ್ಯತೆಯನ್ನು, ದಾಸನಾಗುವುದರ ಸಾರ್ಥಕತೆಯನ್ನು ಒತ್ತಿಹೇಳುತ್ತಿದ್ದರು. ವೀರರಲ್ಲಿ ವೀರಪಡೆಗಳಲ್ಲಿ ಈಗಾಗಲೇ ಇದ್ದ ಕರ್ತವ್ಯಪ್ರಜ್ಞೆ, ಋಣಪ್ರಜ್ಞೆಯ ಜೊತೆಗೆ ಹೊಸದಾಗಿ ಮತ್ತಷ್ಟು ತೀವ್ರವಾಗಿ ಈ ಸೇವಾ ಕೈಂಕರ್ಯದ ಪರಿಕಲ್ಪನೆಯೂ ಬೆಸೆದುಕೊಂಡು ಸಂಪೂರ್ಣ ಶರಣಾಗತಿಯ ಗರುಡ, ಆಂಜನೇಯರ ವ್ಯಕ್ತಿತ್ವಗಳು ಅಪ್ಪಿಕೊಳ್ಳತೊಡಗಿದ್ದವು. ಲೌಕಿಕವಾದ ಒಡೆಯನ ಸೇವೆಗೆ ಒಂದು ಧಾರ್ಮಿಕ ಪರಿವೇಶ ಬರತೊಡಗಿತು. ಹೊಯ್ಸಳರ ಶಾಸನಗಳ ತುಂಬ ಹೀಗೆ ಅರಸರನ್ನು ವಿಷ್ಣುವಿನ ಅವತಾರವೆಂದು ಅವನ ಬಂಟರನ್ನು ಗರುಡರೆಂದು ಗುರುತಿಸುವುದು ಹೆಚ್ಚಾಯಿತು. 'ವಿಷ್ಣುವಿಗೆ ಗರುಡನಿದ್ದಂತೆ ತಮ್ಮ ಆಶ್ರಿತರಿಗೆ ಸೇವಕರು' ಎಂಬ ಹೊಸ ಮೌಲ್ಯ ಹಬ್ಬಿಕೊಳ್ಳತೊಡಗಿತು. ಇವರ ಕಾಲದ ಮಹತ್ವದ ವೀರರು, ವೀರಪಡೆಗಳು, ವೀರಕುಟುಂಬಗಳು ಸುಮಾರು ಮೂರು ಶತಮಾನಗಳು ನಂಬಿ ತಲೆಯಮೇಲೆ ಹೊತ್ತು ನಡೆಸಿದ್ದು ಇದೇ ಮೌಲ್ಯವನ್ನೇ!

**'ಗರುಡರು'**



ಕುವರಲಕ್ಷ್ಮ ಮತ್ತು ಅವನ ಲೆಂಕರು, ಅವನ ಮಡದಿ ಸುಗ್ಗಲೆ ಹಾಗೂ ಅವಳ ಲೆಂಕಿತಿಯರು ಅಗ್ರಹಾರ ಬಾಚಹಳ್ಳಿಯ ಗಂಡನಾರಾಯಣಸೆಟ್ಟಿ–ಮಾರವ್ವೆ ನಾಯಕಿತಿಯರ ಕುಟುಂಬದ ಏಳು ತಲೆಮಾರುಗಳು ಹೊಯ್ಸಳ ಅರಸರಿಗೆ ಗರುಡರಾಗಿ ಭಾಷೆಯನ್ನು ಸಲ್ಲಿಸಿ ಪ್ರಾಣತ್ಯಾಮಾಡಿರುವುದು,[2] ಅವರ ಸೈನ್ಯದ ಮುಂಚೂಣಿಯಲ್ಲಿದ್ದು ಜಯವನ್ನು ಸಾಧಿಸಿಕೊಟ್ಟಿರುವುದನ್ನು ಮರೆಯುವಂತಿಲ್ಲ. ಲೌಕಿಕ ಕ್ಷೇತ್ರದ ಒಡೆಯ ಸೇವಕರ ಪರಿಭಾಷೆಯನ್ನು ಧಾರ್ಮಿಕ ಕ್ಷೇತ್ರಕ್ಕೆ ಅನ್ವಯಿಸುವ, ಆ ಮೂಲಕ ವೀರರಲ್ಲಿ ಒಂದು ಧಾರ್ಮಿಕ ಲೌಕಿಕ ನಿಷ್ಠೆಗಳೆರಡನ್ನು ಏಕೀಭವಿಸಿ ಬೆಸೆಯುವ ಕಾರ್ಯ ವಿಶೇಷವಾಗಿ ನಡೆಯಿತು. ವಿಷ್ಣುಭಕ್ತನಾದ ಗರುಡನನ್ನು ವೀರರ ಆತ್ಯಂತಿಕ ಆದರ್ಶವೆಂಬಂತೆ ಬಿಂಬಿಸಲಾಯ್ತು. ಆ ಗರುಡನಿಗಿಂತ ನಾವು ಕಮ್ಮಿಯಿಲ್ಲ ಎಂಬುದನ್ನು ಸಾಬೀತು ಮಾಡಬೇಕಾಗಿತ್ತು. 'ಭಯಂಕರ ಗರುಡಂಗೆ ಮಾರ್ಮಲೆದು ಹೊಯ್ದುಮರ್ದಪ್ಪಿ...." "ಗಜಮಸ್ತಕದ ಮೇಲೆ ಗರುಡನನಪ್ಪಿ" ಭಾಷೆಯ ಪೂರೈಸುವ ಆದರ್ಶ ಮುಂದಾಯ್ತು.

ಕುವರಲಕ್ಷ್ಮನು ಬಲ್ಲಾಳನ ಪೊರೆದಮಗ, ಪ್ರಿಯಪುತ್ರ. ಅವನಿಗೆ ಅರಮನೆಯೇ ತೊಟ್ಟಿಲು, ಅವನನ್ನು ಕುರಿತು ಅರಮನೆಯವರು ರಾಜ ರಾಣಿಯರು ತೋರುತ್ತಿದ್ದ ಆದರವೇ ಬಾಯ್ಬಣ್ಣೆ!, ಅಂತಃಪುರದ ನಾರಿಯರೇ ದಾದಿಯರಾಗಿದ್ದರಂತೆ! ಈ ಮಾತು ಗರುಡರಂತಹ ಲೆಂಕರ ಅರಸರೊಂದಿಗಿನ ಒಡನಾಟವು ಆತ್ಮೀಯವಾಗಿತ್ತೆಂಬುದನ್ನು ಹೇಳುತ್ತದೆ. ಬಲ್ಲಾಳಭೂಪನು ಸಾಕಿಸಲಹಿದ ಈ ಕುವರ ಲಕ್ಷ್ಮೀಧರ ದಂಡನಾಥನ ಮಡದಿ ಸುಗ್ಗಲೆ ಸಾವಿರ ಲೆಂಕಲೆಂಕಿತಿಯರು ಭಾಷೆಕೊಟ್ಟು ಗಂಡಪೆಂಡೇರಧರಿಸಿದ್ದರು. ಕೊಟ್ಟ ಭಾಷೆಗೆ ಮುದ್ರೆಯೊತ್ತಿದ್ದಂತೆ ಅವು ಲಕ್ಷ್ಮನಕಾಲಿನಲ್ಲಿ ಶೋಭಿಸುತ್ತಿದ್ದವು. ಭಾಷೆಕೊಟ್ಟು ಅಲಂಕಾರಕ್ಕಾಗಿ ಪೆಂಡೇರವನ್ನು ಧರಿಸಿ ಒಡೆಯನ ಸಾವಿನ ಸಂದರ್ಭದಲ್ಲಿ ಅವನ ಒಡೆವೆಯನ್ನೇದೋಚಿ ಬಾಳುವೆನಡೆಸುವ ಹೇಡಿಗಳನ್ನು ಪರಿಹಾಸ ಮಾಡುವಂತೆ ಲಕ್ಷ್ಮನ ವೀರ ಶಾಸನ ಶೋಭಿಸಿದೆ ಎಂದು ಕವಿ ಹೊಗಳಿದ್ದಾನೆ.

"ದೊರೆಪತಿಭಕ್ತಿಗೆ ತನ್ನೊಳ್
ಗರುಡಂ ಗರುಡಂಗೆ ತಾನೆ ದೊರೆ ಪೆರರಾರು
ದೊರೆಯಲ್ಲರೆಂಬತೆಱದಿಂ
ದೊರೆಯಾದುವು ತನ್ನ ಗರುಡನೆಸೆವಾಕೃತಿಗಳ್"

ಎಂಬಲ್ಲಿ ವೀರಲೆಂಕ ಕುವರಲಕ್ಷ್ಮನನ್ನೂ ಗರುಡನನ್ನೂ ಸಮಾನವಾಗಿ ವರ್ಣಿಸಿರುವುದನ್ನು ಕಾಣಬಹುದು. 'ಗರುಡ' ಎಂಬುದು ಪತಿಭಕ್ತಿ, ಶೌರ್ಯಗುಣಗಳನ್ನು ಪಡೆದವರಿಗೆ ಬಿರುದಿನಂತೆ ಬಳಕೆಯಾಗುವುದು ಪ್ರಚಾರಕ್ಕೆ ಬಂದು 'ಗರುಡ'ನಾಗುವುದು ವೀರರಿಗೆ ಹೆಮ್ಮೆಯ ವಿಚಾರವಾಗಿತ್ತು. ಗರುಡನಂತೆ ಹನುಮಂತ, ಕರ್ಣ, ನಂದಿ, ಭೇರುಂಡರಿಗೆ ವಿಶೇಷಪ್ರಚಾರ ಹೊಯ್ಸಳರ ಕಾಲದಲ್ಲಿ ದೊರಕಿತು. ಈ ಭಗವದ್ಬಂಟರನ್ನು, ಸ್ವಾಮಿನಿಷ್ಠರನ್ನು, ವಾಹನಗಳನ್ನು ಆದರ್ಶವೆಂದು ನಂಬಿ ಅವರನ್ನು ಅನುಸರಿಸಿದ ವೀರರು ಸಾಮಾನ್ಯವಾಗಿ ಬೇಡರು, ನಾಯಕರು, ಜಟ್ಟಿಗಳು, ಮಾವಟಿಗರು, ಕುರುಬ ಇತ್ಯಾದಿ, ತಳ ಸಮುದಾಯದವರೇ ಆಗಿರುತ್ತಿದ್ದುದು ಹೆಚ್ಚು.

'ಗರುಡ'ರೇ ಹೊಯ್ಸಳರ ಸೈನ್ಯದ ಬೆನ್ನೆಲುಬೆಂದು ಹೇಳಲಾಗುತ್ತಿತ್ತು. ಆ ಕಾಲದ ಇಡೀ ಕರ್ನಾಟಕದ ಪ್ರಕಟಿತ ಶಾಸನಗಳೆಲ್ಲವನ್ನು ಜಾಲಾಡಿಸಿದರು ಗರುಡರೆಂಬ ವೀರರ ಉಲ್ಲೇಖ ಕೆಲವೇ ಶಾಸನಗಳಲ್ಲಿದೆ. ಪೊರೆದಮಗಂ, ಪ್ರಿಯಪುತ್ರ, ವೇಳೆ, ಲೆಂಕ, ಅಣುಗ, ಡಿಂಗರಿಗರು, ಮಕ್ಕಳ್, ಬೆಸಮಕ್ಕಳ್, ಇತ್ಯಾದಿ ಹೆಸರು ಹೆಚ್ಚಾಗಿ ಕಂಡುಬರುತ್ತವೆ. ಆದರೆ ಆಶ್ಚರ್ಯದ ಸಂಗತಿಯೆಂದರೆ ಹೊಯ್ಸಳರ ಶಾಸನ ಹಾಗೂ ಸ್ಮಾರಕಗಳಲ್ಲಿ ಗರುಡರಂತೆಯೇ ವೀರಮೌಲ್ಯಗಳನ್ನು ಹಿಡಿದು ಸ್ವಾಮಿನಿಷ್ಠೆಯನ್ನು ಮೆರೆದ ಇದುವರೆಗೆ ಗುರುತಿಸದ ಇನ್ನೂ ಅನೇಕ ವೀರ ಪಡೆಗಳನ್ನು ಇತ್ತೀಚೆಗೆ ನನ್ನ ಸಂಶೋಧನೆಯಲ್ಲಿ ಗುರುತಿಸಲಾಗಿದೆ. 'ಗರುಡ'ರಷ್ಟೇ ಸಮರ್ಥರಾದ ಕರ್ನಾಟಕದ ಹೆಮ್ಮೆಯ ಗರಿಗಳೆಂದು ಕರೆಯ ಬಹುದಾದ ಅನೇಕ ವೀರಪಡೆಗಳು (military troop) ಮೊಟ್ಟಮೊದಲ ಬಾರಿಗೆ ಬೆಳಕಿಗೆ ಬಂದಿವೆ. ಎಕ್ಕಟಿಗರ್ ಅಂಗರಕ್ಕರ್ (Super Cops, Troop of special Bodygard) ಭೇರುಂಡನ ಮೊತ್ತದ ಕೂಸುಗಳು(Young militant betalian called the Bherunda Vargam), ಹುಲಿಯ ಜಂಗುಳಿಯ ಮೊತ್ತದ ವೀರರು (Black Cats, a special taskforce) ಮೈಮೇಟ್ಟಿಗಳು (Special troop of

wrestlers and body builder) ಇತ್ಯಾದಿ ಹೆಸರುಗಳಲ್ಲಿ ಕಂಡುಬರುವ ವೀರಪಡೆಗಳು ಹೊಯ್ಸಳರ ರಕ್ಷಣಾವ್ಯವಸ್ಥೆ ಎಷ್ಟು ವ್ಯವಸ್ಥಿತವಾಗಿತ್ತು, ವೈವಿಧ್ಯಮಯವಾಗಿತ್ತು ಎಂಬುದರ ಮೇಲೆ ಬೆಳಕು ಚೆಲ್ಲುತ್ತವೆ.

ವೈಷ್ಣವಧರ್ಮ ಪ್ರಾಚೀನವಾದ ಧರ್ಮವಾಗಿದ್ದರೂ ಅದು ಸಮಾಜಮುಖಿಯಾಗಿ ಜನಸಾಮಾನ್ಯರತ್ತ ಮುಖಮಾಡಿದ್ದು ಮಾತ್ರ ಶ್ರೀವೈಷ್ಣವ ಧರ್ಮವೆಂಬ ಹೆಸರಿನಲ್ಲಿ ರಾಮಾನುಜಾಚಾರ್ಯರ ಪ್ರವೇಶದೊಂದಿಗೆ. ಮಧ್ಯಕಾಲೀನ ಕರ್ನಾಟಕದಲ್ಲಿ, ಭಾಗವತ ಮೂಲದ ವಿಷ್ಣುವಿನ ಆರಾಧನೆಯೊಂದಿಗೆ ಮಿಳಿತವಾದ ಶ್ರೀವೈಷ್ಣವ ಪಂಥದ ಪೂರ್ಣ ಶರಣಾಗತಿಯ ಪ್ರಪತ್ತಿಯ ಕಲ್ಪನೆಯೂ ಮಾಧ್ವರ ಸೇವಾಪ್ರಧಾನವಾದ ದಾಸತ್ವಭಕ್ತಿಗಳು ಬೆರೆತು ವೈಷ್ಣವ ಧರ್ಮವನ್ನು ಜನಪ್ರಿಯಗೊಳಿಸಿದವು. ವೈಷ್ಣವಧರ್ಮ ರಾಜಾಶ್ರಯವನ್ನು ಪಡೆದು ಪ್ರಭಾವೀ ಧರ್ಮವಾಗಿ ಬೆಳೆಯಿತು. ಕರ್ನಾಟಕದ ತುಂಬಾ ತುಂಬಿರುವ ಸುಂದರ ವಿಷ್ಣು ದೇವಾಲಯಗಳೂ, ವಿಷ್ಣು ಪ್ರಾಧಾನ್ಯತೆಯನ್ನು ಬಿಂಬಿಸುವ ಮಧ್ಯಕಾಲೀನ ಕನ್ನಡ ಸಾಹಿತ್ಯ ಕೃತಿಗಳೂ, ಕೀರ್ತನ ಸಾಹಿತ್ಯವೂ ವಿಫುಲವಾಗಿ ರಚನೆಗೊಂಡಿರುವುದು ಈ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಕರ್ನಾಟಕವು ವೀರರ ನಾಡೆಂಬುದನ್ನು ಸಾವಿರಾರು ವೀರಗಲ್ಲುಗಳು ವೀರಮರಣದ ಕಥೆಗಳನ್ನು ತೆರೆದಿಟ್ಟಿರುವುದೇ ಸಾಕ್ಷಿ. ಕೀಟಸ್ಕುಂಟೆ, ವೇಳೆವಾಳಿಗಳು, ಜೋಳವಾಳಿಗಳು ಗರುಡರು, ಲೆಂಕರ ಜೊತೆಗೆ ಇತ್ತೀಚೆಗೆ ಬೆಳಕಿಗೆ ಬಂದಿರುವ ಕೋಶರರ್ ಎಳ್ವತ್ತರ್, ಎಕ್ಕಟಿಗ ವೀರರು, ಭೇರುಂಡದ ಮೊತ್ತದ ಕೂಸರು, ಹುಲಿಯ ಜಂಗುಳಿಯ ಮೊತ್ತ, ಮೈಮೇಟಿಗಳನ್ನು ಒಳಗೊಂಡ ವೀರರು ವಿಶೇಷವಾಗಿ ಕರ್ನಾಟಕದ ರಕ್ಷಣೆಯ ಹೊಣೆಯನ್ನು ಹೊತ್ತು ಕರ್ತವ್ಯ ನಿರ್ವಹಿಸಿರುವುದು ಸಾಬೀತಾಗಿದೆ.

ಇಂತಹ ಸಮರ್ಪಣಾ ಭಾವದ ವೀರರ/ವೀರಪಡೆಗಳ ಸೇವಾಕೈಂಕರ್ಯದ ಹಿಂದಿರುವ ತಾತ್ವಿಕ ವಿಚಾರಗಳು ಯಾವುವು? ಮತ್ತು ಅವುಗಳನ್ನು ರೂಪಿಸುತ್ತಿದ ಶಕ್ತಿಗಳು ಯಾವುವು? ಕಾಲಾಂತರದಲ್ಲಾದ ಮೌಲ್ಯ ಪಲ್ಲಟಗಳು, ಇದರಲ್ಲಿ ಮತಧರ್ಮಗಳ ಪಾತ್ರವೇನು? ಎಂಬುದನ್ನು ಅರಿಯುವುದು ಅವಶ್ಯಕವಾದುದು.

ಅರಸರೊಂದಿಗೆ ಯುದ್ಧದಲ್ಲಿ, ಸಾವಿನಲ್ಲಿ ಒಂದಾಗುವ ಖಾಸಾವೀರರು, ಅಂಗರಕ್ಷಕರು, ವೀರಪಡೆಗಳು ಪ್ರಪಂಚದಾದ್ಯಂತ ಇದ್ದರೆಂಬುದು ತಿಳಿದು ಬರುತ್ತದೆ. ಕರ್ನಾಟಕದ ಇಂತಹ ವೀರರನ್ನು ಕೈ ಹಿಡಿದು ನಡೆಸಿದ ಮುಖ್ಯ ವಿಚಾರಗಳು ಎರಡು. ಸಾವಿನ ನಂತರದಲ್ಲೂ ಇದೆ ಎಂದು ನಂಬಲಾದ ಬದುಕಿನಲ್ಲಿಯೂ ಒಡೆಯನೊಂದಿಗೆ ಒಂದಾಗಿ ಸೇವೆಮಾಡುವ ವೀರಸ್ವರ್ಗ. ಮತ್ತೊಂದು ಋಣದ ಕಲ್ಪನೆ – ಕೃತಜ್ಞತೆ, ತನ್ನ ಬದುಕು ಒಡೆಯನಿಗೆ ಮೀಸಲಾಗಿರಬೇಕೆಂಬ ನಿಷ್ಠೆ. ಇದಕ್ಕೆ ಕಾರಣ ಜೋಳದ ಪಾಳಿ/ ಅನ್ನದ ಋಣ. ಈ ಮೌಲ್ಯಗಳಿಗಾಗಿ ಪ್ರಾಣ ತ್ಯಾಗಮಾಡಿದ ಸಾವಿರಾರು ಯೋಧರನ್ನು ನಾವು ಮರೆಯುವಂತಿಲ್ಲ.

**ಮೌಲ್ಯ ಪಲ್ಲಟ.**

ವೀರಮೌಲ್ಯಗಳು ಕ್ಷಾತ್ರಯುಗದಲ್ಲಿ ಅತ್ಯಂತ ಪ್ರಧಾನವಾದ ಮೌಲ್ಯವಾಗಿದ್ದವು. ಈ ಮೌಲ್ಯವು, ರಾಜ ಪ್ರತ್ಯಕ್ಷದೈವವೆಂಬ ನಂಬಿಕೆಯನ್ನು ಭಿತ್ತಿ “ಕ್ಷಣವಿಧ್ವಂಸಿನೀ ಕಾಯೆ ಕಾ ಚಿಂತೆ ಮರಣೇ ರಣೆ” ಎಂಬ ತತ್ವ ಸಾರುವ ಮೂಲಕ ರಾಜನಿಗಾಗಿ ಪ್ರಾಣನೀಡುವ ಬಂಟರನ್ನು, ಸೇವಕವರ್ಗದವರನ್ನು ಹುಟ್ಟುಹಾಕಿತ್ತು. ಅನೇಕ ವೀರಪಡೆಗಳು ಅರಸೊತ್ತಿಗೆಯ ಉಳಿವಿಗಾಗಿ ಊಳಿಗಮಾಡುತ್ತಿದ್ದುವು. ೧೨ನೇ ಶತಮಾನದ ಹೊತ್ತಿಗೆ ಕರ್ನಾಟಕದಲ್ಲಾದ ಸಮಾಜೋಧಾರ್ಮಿಕ ಪಲ್ಲಟವು ಹೊಸಮೌಲ್ಯಗಳ ಹುಟ್ಟುವಿಕೆಗೆ ಕಾರಣವಾಯಿತು. ಕ್ಷಾತ್ರಮೌಲ್ಯಗಳು ಮಂಕಾಗಿ ರಾಜಭಕ್ತಿ ದೈವಭಕ್ತಿಯಾಗಿ ಮಾರ್ಪಾಟಾಗತೊಡಗಿತು. ರಾಜಪ್ರಭುತ್ವದ ಪರಾಕಾಷ್ಠೆಯನ್ನು ಪ್ರಶ್ನಿಸಲು ಆರಂಭಿಸಿದ ಮೇಲೆ, ಅವರ ಊಳಿಗವನ್ನು ನಿರಾಕರಿಸಿದಮೇಲೆ, ವೀರನಿಗೆ ಪ್ರಾಮುಖ್ಯತೆ ಕಡಿಮೆಯಾಗತೊಡಗಿತು. ಹೀಗಾಗಿ ವಚನಗಳು ಮತ್ತು ಭಕ್ತಿ ಪ್ರಧಾನವಾದ ಕಾವ್ಯಗಳಲ್ಲಿ ಜೋಳವಾಳಿ, ಲೆಂಕವಾಳಿ, ಎಕ್ಕಟಿಗರ ಬಗ್ಗೆ ಒಂದು ರೀತಿಯ ತಿರಸ್ಕಾರ, ಅಸಡ್ಡೆ ಬೆಳದಿರುವುದು ಕಂಡು ಬರುತ್ತದೆ. ಇಂತಹ ವೀರ ಪರಾಕ್ರಮಗಳು ಭಕ್ತರ ಸಾತ್ವಿಕ ಶಕ್ತಿಯಮುಂದೆ ಸೋತು ಸತ್ವಕಳೆದುಕೊಳ್ಳುವಂತೆ ಚಿತ್ರಿಸಲಾಗಿದೆ. ವೀರರಿಗೆ ವೀರಪಡೆಗಳಿಗೆ ವೈಷ್ಣವ, ಶೈವದೀಕ್ಷೆಗಳನ್ನು ನೀಡುವ, ಒಕ್ಕಲಾಗಿಸುವ ಪ್ರಕ್ರಿಯೆ ವಿಶೇಷವಾಗಿ ೧೨ನೆಯ ಶತಮಾನ ಹಾಗೂ ಆ ನಂತರ ನಡೆಯತೊಡಗಿದುದರಿಂದ ಈ ವೀರರ ಬದುಕಿನಲ್ಲಿ ಒಂದು ಬದಲಾವಣೆ ಕಾಣಿಸಿಕೊಂಡಿತು. ಈ ಹೋರಾಟದ ವೃತ್ತಿವೀರರು ಒಂದು ರೀತಿಯ ಇಬ್ಬಂದಿತನದಲ್ಲಿ ಸಿಕ್ಕಿರುವುದು ಕಂಡುಬರುತ್ತದೆ. ಈ ವಿಚಾರವನ್ನು ಪುಷ್ಟೀಕರಿಸಲು ಕೆಲವು ಉದಾಹರಣೆಗಳನ್ನು ನೋಡಬಹುದು.

ಮೋಳಿಗೆಯ ಮಾರಯ್ಯನ ವಚನವೊಂದರಲ್ಲಿ “ಎಕ್ಕಟಿಗನ ಮಕ್ಕಳೆಲ್ಲರೂ ನಷ್ಟಸಂತಾನವಾದರು”[೩] ಎಂದುಹೇಳುತ್ತಾನೆ. ಅಶಾಶ್ವತವಾದ ಅಧಿಕಾರವನ್ನು ಸಂಪತ್ತನ್ನು ನಂಬಿದ ಅರಸರ ಮನೆಮಕ್ಕಳಾಗಿ ಅನ್ನದ ಋಣಕ್ಕಾಗಿ ದುಡಿಯುತ್ತಿದ್ದ ಎಕ್ಕಟಿಗರ ಬದುಕನ್ನು ಕಂಡವನು. ಅಂತಹ ವೀರರ ಬದುಕಿನ ಅಂತ್ಯ ಸಾವು ನೋವುಗಳಿಂದ ಕೂಡಿರುತ್ತಿತ್ತು. ಆಳರಸರ ಅಹಮ್ಮಿಗೆ ಸಿಕ್ಕಿ ನಷ್ಟವಾಗಿಹೋಗುತ್ತಿದ್ದ ಎಕ್ಕಟಿಗರಂತಹವರ ಬಗೆಗೆ ಈ ವಚನಕಾರ ಭಕ್ತನಾದ ಮೋಳಿಗೆಯ ಮಾರಯ್ಯ ಮರುಗುವುದು ಸಹಜವೇ ಆಗಿದೆ. ಬಸವಣ್ಣನವರು ವೇಳೆವಾಳಿಯವನಾನಲ್ಲ, ಜೋಳವಾಳಿಯವ ನಾನಲ್ಲ’ ಎನ್ನುವ ಮಾತಿನಮೂಲಕ ಅರಸರ ಸೇವೆಗಿಂತ ಶಿವನ, ಶರಣರ ಸೇವೆಯಲ್ಲಿ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳುವುದರ ಬಗೆಗೆ ನಮ್ಮ ಗಮನ ಸೆಳೆಯುತ್ತಾರೆ.[೪] ಅಂದರೆ ತಾವು ಮನುಷ್ಯನ ಅನ್ನದ ಋಣಕ್ಕಾಗಿ ಹೋರಾಡುವಂಥವನಲ್ಲ ಒಡೆಯನಿಗೆ (ಪರಮಾತ್ಮನಿಗೆ) ಸಂಪೂರ್ಣವಾಗಿ ಸಮರ್ಪಿಸಿಕೊಂಡವನು ಎಂಬುದನ್ನು ಸೂಚಿಸಿರುವುದನ್ನು ಕಾಣಬಹುದು. “ಲಿಂಗಮನರಸಿ ಪಿಡಿದೆಕ್ಕಟಿಗ ತುರುವರಿಗತನವನೆಂದೆಂದು ಬಿಟ್ಟಪೆ ಬಿಟ್ಟಪೆ.....” ಎಂಬ ಮಹಾದೇವಿಯಕ್ಕನ ಪುರಾಣದಲ್ಲಿನ.[೫] ಮಾತುಗಳು ರಾಜಭಕ್ತಿಗೆ ಒಗ್ಗಿಹೋದ, ಆ ಮೂಲಕ ಹೋರಾಟ, ತುರುಗಳನ್ನು ಆಕ್ರಮಿಸಿ ಸೆರೆಹಿಡಿಯುವ ‘ತುರುವರಿಗತನ’ಗಳಿಗೂ ಒಗ್ಗಿಹೋಗಿರುವ ಎಕ್ಕಟಿಗರನ್ನು ವಿಡಂಬಿಸುತ್ತಿದೆ. ಎಕ್ಕಟಿಗವೀರನು ಲಿಂಗದೀಕ್ಷೆಯನ್ನು ಪಡೆದು ಶರಣಜೀವನವನ್ನು ಅಳವಡಿಸಿಕೊಂಡು ಬದುಕುವುದು ಅಷ್ಟು ಸುಲಭವಾದುದಲ್ಲ. ಅನ್ಯರ ಸಂಪತ್ತನ್ನು ದೋಚುವ, ಆಕ್ರಮಣಕಾರಿ ಗುಣಗಳನ್ನು ಹೊಂದಿದ ಅರಸರ ಊಳಿಗದಲ್ಲಿ ಕಲಿತ ಯುದ್ಧ ಪ್ರೀತಿ, ತುರುವರಿಗತನವನ್ನು ‘ಎಂದೆಂದು ಬಿಟ್ಟಪೆ, ಬಿಟ್ಟಪೆ’ ಎಂದು ಹೇಳಿದಮಾತ್ರಕ್ಕೆ ಅವು ಬಿಟ್ಟುಹೋಗುವುದಿಲ್ಲ, ಲಿಂಗವನ್ನು ಅರಸಿ ನಂಬಿ ಹಿಡಿದ ಎಕ್ಕಟಿಗ ಅರಸನಿಗೆ ತೋರುತ್ತಿದ್ದ ನಿಷ್ಠೆಯನ್ನೇ, ಲಿಂಗಕ್ಕೆ ತೋರುವುದರ ಮೂಲಕ ತನ್ನ ಬದುಕಿನಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬೇಕಾಗುವುದೆಂಬುದನ್ನು

ಹೇಳಿದೆ. ವೀರಯೋಧರ ಬದುಕಿನಲ್ಲಾಗುತ್ತಿದ್ದ ಇಂತಹ ಮೌಲ್ಯಬದಲಾವಣೆ, ಆಮೂಲಕ ಜೀವನಕ್ರಮದ ಬದಲಾವಣೆಯನ್ನು ಇದು ಸೂಚಿಸುತ್ತದೆ. ಬಾಣಾಸುರನ ಸೈನ್ಯದಲ್ಲಿದ್ದ ಎಕ್ಕಟಿಗರ ಪರಾಕ್ರಮವೆಲ್ಲ ಕೃಷ್ಣನ ದೈವೀಕತೆಯ ಮುಂದೆ ಸರ್ವನಾಶವಾಗುವುದನ್ನು ಕನಕದಾಸರು ತಮ್ಮ ಮೋಹನತರಂಗಿಣಿ ಕಾವ್ಯದಲ್ಲಿ ಚಿತ್ರಿಸಿದ್ದಾರೆ. ಈ ಮೌಲ್ಯ ಬದಲಾವಣೆಯನ್ನು ಸ್ವತಃ ತಮ್ಮ ಬದುಕಿನಲ್ಲೇ ಅವರು ಮಾಡಿಕೊಂಡವರು. ಸಿಂಗಿರಾಜಪುರಾಣದಲ್ಲಿ[೬] ಬಿಜ್ಜಳನು ಭಕ್ತನಾದ ಲೆಕ್ಕದ ಬಾಚರಸರ ಕಣ್ಣುಗಳನ್ನು ಕೀಳುವಂತೆ ಆಜ್ಞೆಮಾಡುತ್ತಾನೆ. ತನ್ನನ್ನು ವಿರೋಧಿಸಿದ ಭಕ್ತರ ಮೇಲೆ ಸೈನ್ಯಸಮೇತ ನುಗ್ಗಿ ಬರುತ್ತಾನೆ. "ನಡೆತಂದ ರಾಯ ರಾವುತರ ಗೊಂದಣದೊಳಗೆ ಎಡಬಲದ ಎಕ್ಕಟಿಗರುಗಳ ಸಂದಣಿಯೊಳಗೆ ನಾನಾ ರೀತಿಯ ಆಯುಧಗಳನ್ನು ಹಿಡಿದು ಎಡೆಬಿಡದೆ 'ಇರಿ-ಕಡಿ' ಎಂಬ, ನಾಯಕರ ಬಲದೊಳಗೆ ಗಜತುರುಗ ಸೈನ್ಯ ಸಮೇತನಾಗಿ ನುಗ್ಗಿಬರುತ್ತಾನೆ! ಆದರೆ ಭಕ್ತನಾದ ಲೆಕ್ಕದ ಬಾಚರಸರ ಪಂಚಾಕ್ಷರೀ ಮಂತ್ರದಿಂದ ಜೀವ ತಳೆದ ಸ್ಮಶಾನದ "ಮುಂಡಗಳು ಎದ್ದು ಎಡಬಲದೆಕ್ಕಟಿಗರುಗಳ ಖಂಡೆಗಳ ಸೆಳದುಕೊಂಡು ಚಾರಿವರಿವುತ ಕಡಿಯೆ ಕೊಂಡೆಯರು ಕೆದಜಿಬಿದ್ದೋಡುತಿರೆ ಬೆಂಬತ್ತಿ ಬರೆ ಹೆದರಿಸುತ್ತ. ಗಂಡುಗಲಿಗಳ ಹೊಡೆಯೆ" ಬಿಜ್ಜಳನ ವೀರಪಡೆ ಸರ್ವನಾಶವಾಗುತ್ತದೆ, ಹೆದರಿ ಓಡುತ್ತದೆ. ಸೈನ್ಯದಲ್ಲಿದ್ದ ವೀರರು ಹಾಗೂ ಖಾಸ ಎಡಬಲದ ಎಕ್ಕಟಿಗ ಅಂಗರಕ್ಷಕರೆಲ್ಲರ ಕೊರಳನ್ನು ಕೊಯ್ಯುತ್ತ ಮುನ್ನುಗ್ಗುವ ಮುಂಡಗಳ ಮುಂದೆ ಬಿಜ್ಜಳ ಹೆದರಿ ನಿಲ್ಲುತ್ತಾನೆ. ಆದರೆ ಆ ಮುಂಡಗಳು ಬಸವನ ಮುಂದೆ ಮಣಿಯುತ್ತವೆ! ಇಷ್ಟೆಲ್ಲಾ ವೀರರ ಪರಾಕ್ರಮ ಅವರ ಅಯುಧಗಳು ಕೀರ್ತಿಯೆಲ್ಲವೂ ಈ ಕಾವ್ಯದಲ್ಲಿ ವಿಡಂಬನೆಗೆ ಒಳಗಾಗಿದೆ. ಸೊಡ್ಡಳ ಬಾಚಯ್ಯನ ಶಿವ ಪಂಚಾಕ್ಷರಿಯಿಂದ ಜೀವ ಪಡೆದ ಆ ಮುಂಡಗಳು ಕಾಳಿಮಯ್ಯ, ಕರಿಯಕೇಶವ, ಪೋಚರಸ, ದಾಮೋದರ, 'ಗಜಸಿಂಹ'ನೆಂಬ ಬಿರುದಿನ ಕಾಮನು, 'ಅಂಕೆಕಾರ' ಸುರಗಿಯಬೊಮ್ಮ, 'ಆಳುತನದಲ್ಲಿ ವ್ಯಾಘ್ರ'ನೆಂಬ ಬಿರುದಿನ ಸೋಮ 'ಛಲದಂಕಮಲ್ಲ' ಶಿರುಮ, 'ರಣಭೈರವ' ಬಿರುದಿನ ಸಾಳವ 'ಮೀಸೆಮರಿಗಂಡು' ಎಂಬ ಬಿರುದಿನ ವಿರುಪ, 'ತೊಲಗದಕಂಬ' ಭೀಮ ಇಂಥ ಗಂಡುಗಲಿಗಳಾದ ಎಕ್ಕಟಿಗರು ದೈವಿಕ ಶಕ್ತಿಯಿಂದ ಮೇಲೆದ್ದ ಮುಂಡಗಳಿಗೆ ಬಲಿಯಾಗಿ ಹೆಣದ ಬಣಬೆಯಾದ ಚಿತ್ರಣ ರೂಪಕಾತ್ಮಕವಾಗಿ ವೀರಮೌಲ್ಯವು ಸತ್ವ ಕಳೆದುಕೊಂಡದ್ದನ್ನು ಧ್ವನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಮೋಳಿಗೆ ಮಾರಯ್ಯನ 'ಎಕ್ಕಟಿಗನಮಕ್ಕಳು ನಷ್ಟಸಂತಾನವಾದರು' ಎಂಬ ಮಾತನ್ನು ಅರ್ಥೈಸಬೇಕಾಗುತ್ತದೆ.

ಒಂದು ಕಡೆ ಶರಣರ ವಿಚಾರಗಳು ಮತ್ತೊಂದು ಕಡೆ ವೈಷ್ಣವ, ಶ್ರೀವೈಷ್ಣವ ತತ್ವಗಳು ಇವೆಲ್ಲ ಪರೋಕ್ಷವಾಗಿ ಪ್ರಭುತ್ವದ ಮೇಲೆ ಒಂದು ಒತ್ತಡವಿನ್ಯಾಸವನ್ನುಂಟು ಮಾಡುತ್ತಿದ್ದವು. ತನ್ನೆಲ್ಲ ಅಸ್ತಿತ್ವ ದಿಗ್ವಿಜಯ ಸಾಧನೆಗೆ ಕಾರಣರಾಗುತ್ತಿರುವ ಈ ನಿಷ್ಠಾವಂತ ವೀರರು, ವೀರ ಪಡೆಗಳು, ಕುಟುಂಬಗಳು ವಿಚಲಿತವಾಗದಂತೆ ಆಶ್ರಯದಾತನಿಗೆ ನಿಷ್ಠರಾಗಿರುವಂತೆ ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗತೊಡಗಿತ್ತು.

ಈ ರೀತಿ ಮೌಲ್ಯ ಪಲ್ಲಟಗೊಳ್ಳುತ್ತಿದ್ದ ಕಾಲದಲ್ಲಿ ರಾಮಾನುಜರು ದಕ್ಷಿಣ ಕರ್ನಾಟಕದಲ್ಲಿ ಪ್ರಪತ್ತಿಯಿಂದ[೭] ಮುಕ್ತಿ ಸಾಧ್ಯ ಎಂಬುದನ್ನೂ, ಸೇವೆಗೆ ಪ್ರಾಧಾನ್ಯತೆಯನ್ನು ನೀಡಿದರು ಮತ್ತು ದಾಸನಾಗುವುದರ ಬಗೆಗೂ ಒತ್ತಿಒತ್ತಿ ಹೇಳುತ್ತಿದ್ದರು. ಆ ಸಂದರ್ಭದಲ್ಲಿ ಸಾಮಾನ್ಯ ಜನರಿಗೆ ಜಾತಿಭೇದಭಾವವಿಲ್ಲದ 'ಪ್ರಪತ್ತಿ'ಯು ಒಂದು'ಬಿಡುಗಡೆಯಂತೆ' ತೋರಿತು. ಆಳರಸರಿಂದ ಮೊದಲುಗೊಂಡು ಅಧಿಕಾರೀವರ್ಗ, ದಂಡನಾಯಕರು, ವೀರಬಂಟರು, ವೀರಪಡೆಗಳು ಇದರಿಂದ ಆಕರ್ಷಿತರಾದರು. ರಾಮಾನುಜರ ಪ್ರಭಾವಕ್ಕೊಳಗಾಗಿ ಅರಸರು ಶ್ರೀವೈಷ್ಣವ ಧರ್ಮವನ್ನು ಸ್ವತಃ ಸ್ವೀಕರಿಸ ತೊಡಗಿದರು. ಇದರಿಂದ ಅದಕ್ಕೆ ಹೆಚ್ಚಿನ ಮಾನ್ಯತೆ ಒದಗಿತು. ಇದು ಸಹಜವಾಗಿ ಕರ್ನಾಟಕದ ಧಾರ್ಮಿಕ ಮತ್ತು ಸಾಂಸ್ಕೃತಿಕ ಜಗತ್ತಿನ ಮೇಲೆ ಪ್ರಭಾವ ಬೀರತೊಡಗಿತು.

ಉತ್ತರ ಕರ್ನಾಟಕದಲ್ಲಿ ವೀರಶೈವ ಧರ್ಮವು ಜಾತಿ ಪರಿಕಲ್ಪನೆಯನ್ನು ಒಡೆದು, ಮುಕ್ತ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸತೊಡಗುತ್ತಿರುವ ಸಂದರ್ಭದಲ್ಲೇ ೧೨ನೇ ಶತಮಾನದ ಆದಿ ಭಾಗದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಈ ಸಾಮಾಜಿಕ ಸಂಚಲನವು ಸಮಾಜಸುಧಾರಕ ದೃಷ್ಟಿಯುಳ್ಳ ರಾಮಾನುಜರಿಂದ ಪ್ರಾರಂಭವಾಗಿತ್ತು. ತಳಸಮುದಾಯದಿಂದ ಬಂದ ಅನೇಕ ಆಳ್ವಾರರ ಭಕ್ತಿ ರಾಮಾನುಜರನ್ನು ಪ್ರಭಾವಿಸಿತ್ತು. ಎಲ್ಲರಿಗೂ ಪ್ರಪತ್ತಿಯಿಂದ (ದೈವಕ್ಕೆ ಸಂಪೂರ್ಣ ಒಪ್ಪಿಸಿಕೊಳ್ಳುವುದು) ಮುಕ್ತಿಗೆ ಅವಕಾಶವಿದೆ ಎಂದು ಅವರು ಸಾರಿದರು. ವೈಷ್ಣವದೀಕ್ಷೆ ನೀಡಲು ಪ್ರಾರಂಭಿಸಿ, ಸಮಾಜದ ಎಲ್ಲಸ್ತರಗಳನ್ನು ವಿಷ್ಣುಭಕ್ತಿಯ ಒಂದು ಸೂರಿನಡಿಗೆ ತರಲು ಪ್ರಯತ್ನಿಸಿದರು. ಹಾಗಾಗಿ ಅಗ್ರಹಾರಗಳೊಂದಿಗೆ ಕೇಶವಪುರಗಳ ನಿರ್ಮಾಣ ವಿಶೇಷವಾಗಿ ನಡೆಯಿತು. ದೇವ ಊಳಿಗಕ್ಕೆ ರಾಮಾನುಜರೊಂದಿಗೆ ಬಂದ ವಲಸಿಗರು, ನಂತರದ ಕಾಲದಲ್ಲಿ ವಲಸೆಗೊಂಡ ಶ್ರೀ ವೈಷ್ಣವ ಬ್ರಾಹ್ಮಣರು ಹಾಗೂ ಇತರರು, ಸ್ಥಳೀಯ ನಾನಾ ಜಾತಿಗಳ ಜನರು ಈ ಕೇಶವಪುರಗಳಲ್ಲಿ ನೆಲಸತೊಡಗಿದರು. ವಿಷ್ಣುವು ನಾನಾ ಅವತಾರಗಳಲ್ಲಿ ಪೂಜೆಗೊಳ್ಳತೊಡಗಿದನು. ಕೃಷ್ಣನ ವ್ಯಕ್ತಿತ್ವವಂತೂ ಜನಮನ ಸೂರೆಗೊಳ್ಳತೊಡಗಿತು. ಪಶುಪಾಲಕ ಗೋಪನು ಸಾಮಾನ್ಯನಿಗೆ ಅತ್ಯಂತ ಆಪ್ತನಾದದ್ದರಲ್ಲಿ ಆಶ್ಚರ್ಯವಿಲ್ಲ. ವಿಷ್ಣುವಿನ ದಶಾವತಾರಗಳೊಂದಿಗೆ ಈ ಕೃಷ್ಣನ ವಿಶೇಷ ಅವತಾರವೆಂದು ಕರೆಯುವ ಶ್ರೀನಿವಾಸ ಅಥವಾ ವೆಂಕಟರಮಣನು ವಿಜಯನಗರ ಅರಸರ ಕಾಲದಲ್ಲಿ ಪ್ರಭಾವಿಸತೊಡಗಿದನು. ಈ ದೈವವು ಸಕಲ ಜಾತಿ, ಜನಾಂಗಗಳ ಆರಾಧ್ಯ ಮೂರ್ತಿಯಾಗಿ ಇಂದಿಗೂ ಆರಾಧನೆಗೊಳ್ಳುತ್ತಿದ್ದಾನೆ.

ವೈಷ್ಣವ ದೇವಾಲಯಗಳಲ್ಲಿನ ವೈಭವಯುತ ಆರಾಧನೆಗಳು, ಸಾಂಸ್ಕೃತಿಕ ಉತ್ಸವ, ಜಾತ್ರೆ, ಪರ್ವಗಳು ಸಾಮಾನ್ಯರನ್ನು ಹತ್ತಿರಕ್ಕೆ ಸೆಳೆದವು. ರೂವಾರಿಗಳು, ನೇಕಾರರು, ಕುಂಬಾರರು ಮೊದಲಾಗಿ ನಾನಾ ವೃತ್ತಿವಂತರು, ವಣಿಕರು ವೈಷ್ಣವ ಧರ್ಮದೆಡೆಗೆ ಆಕರ್ಷಿತರಾಗಿ ಒಕ್ಕಲಾಗತೊಡಗಿದರು. ವೈಷ್ಣವಧರ್ಮ ಸ್ವೀಕರಿಸಿದ ಹೊಸ ದೊಡ್ಡ ಗುಂಪೊಂದು ಸಮಾಜದಲ್ಲಿ ಪ್ರಮುಖ ಸ್ಥಾನ ಪಡೆದುಕೊಳ್ಳತೊಡಗಿತು. ಅವರ ಆಚಾರ ವಿಚಾರಗಳಲ್ಲಿ ಬದಲಾವಣೆ ಕಾಣಿಸಿಕೊಂಡಿತು. ಸಾತಾನಿಗಳು, ವುಷ್ಟುಮರು, ದಾಸಬ್ರಾಹ್ಮಣರು, ವಿಶ್ವಕರ್ಮಬ್ರಾಹ್ಮಣರು, ದೇವಾಂಗಬ್ರಾಹ್ಮಣರು, ನಾಮದಾರಿಗಳು ಮುಂತಾದ ಹೆಸರುಗಳಿಂದ ಕರೆದುಕೊಳ್ಳುವ ಅನೇಕ ಪಂಗಡಗಳು ಈ ವೈಷ್ಣವ ಧರ್ಮದ ಪ್ರಭಾವಕ್ಕೆ ಒಳಗಾದವರೇ.

ಸಾಮೂಹಿಕವಾಗಿ ದೀಕ್ಷೆನೀಡಿ ಎಲ್ಲರಿಗೂ ಧಾರ್ಮಿಕ ಸ್ಥಾನಮಾನ ಒದಗಿಸುವುದು, ದೇವಾಲಯಗಳಿಗೆ ಪ್ರವೇಶ ನೀಡುವುದು, ದೈವ ಕೈಂಕರ್ಯಗಳಲ್ಲಿ ಅವರನ್ನು ತೊಡಗಿಸಿಕೊಳ್ಳುವುದು, ಕೆಳಜಾತಿಯವರ ಮೇಲ್ಮುಖ ಚಲನೆಗೆ ಅವಕಾಶ ಮಾಡಿಕೊಟ್ಟಿತು. ಇದನ್ನು ಅಂದಿನ ಸಂಪ್ರದಾಯ ಸಮಾಜ ಅಷ್ಟು ಸುಲಭವಾಗಿ ಒಪ್ಪಿಕೊಂಡಿರಲಿಲ್ಲ. ಆದರೆ ರಾಜಾಶ್ರಯ ಪಡೆದು ಪ್ರಬಲವಾದ ಧರ್ಮವಾಗಿದ್ದರಿಂದ ವೈಷ್ಣವಧರ್ಮವನ್ನು ಸಹಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಅಂಥವರ ಮೇಲಿತ್ತು. ಆದರೂ ಇದು ಧಾರ್ಮಿಕ ಸಂಘರ್ಷಕ್ಕೆ

ಎಡೆ ಮಾಡಿಕೊಟ್ಟಿತ್ತು. ಶಾಸನ ಕವಿಯೊಬ್ಬ ಹೊಯ್ಸಳ ಅರಸ ನರಸಿಂಹನನ್ನು ಹೊಗಳುತ್ತ, ಯುದ್ಧಗಳಲ್ಲಿ ಊರ್ಜಿತ ಅರ್ಥಚಯವನ್ನು ಮಾಡಿದ್ದರಿಂದ ಅವನು ಶೂದ್ರನಾದ, ಪರಸೈನ್ಯವೆಂಬ ಅಂಬುಧಿ ಬಡಬಾಗ್ನಿಯನ್ನು ಎದುರಿಸಿ ಧೈರ್ಯ ತೋರಿದ್ದರಿಂದ ಕ್ಷತ್ರಿಯನಾದ ಇದು ವಿನಃ 'ವರ್ಣಸಂಕರಂ ಈ ರಾಷ್ಟ್ರದೊಳಿಲ್ಲೆನಿಸಿ' ಧಾತ್ರೀ ಚಕ್ರವನ್ನು ರಕ್ಷಿಸುತ್ತಿದ್ದಾನೆ, ಇದು ಆಶ್ಚರ್ಯ ಎಂದು ಉದ್ಗರಿಸಿದ್ದಾನೆ.[೮] ಈ ಅಭಿವ್ಯಕ್ತಿಯು ಆ ಕಾಲದಲ್ಲಿ ಹೊಯ್ಸಳ ನಾಡಿನಲ್ಲಿ ಅಂತ್ಯಜರಿಗೆ ದೀಕ್ಷೆ ನೀಡುವುದರ ಬಗೆಗೆ ಎದ್ದಿರಬಹುದಾದ ಅಸಮಾಧಾನ, ವಿರೋಧಕ್ಕೆ ಸಮಜಾಯಿಷಿಯೂ ಅದೇ ಕಾಲದಲ್ಲಿ ಉತ್ತರ ಕರ್ನಾಟಕದ ಬಿಜ್ಜಳನ ರಾಜ್ಯದ ವೀರಶೈವ ಧಾರ್ಮಿಕ ಕ್ರಾಂತಿಯ ವರ್ಣಸಂಕರದ ಬಗೆಗಿನ ಪ್ರತಿಕ್ರಿಯೆಯೂ ಆಗಿರುವುದು ಸ್ಪಷ್ಟವಾಗಿದೆ.

ವೀರಶೈವ ಧರ್ಮದ ದೀಕ್ಷೆಗೂ ವೈಷ್ಣವ ಧರ್ಮದೀಕ್ಷೆಗೂ ಒಂದು ವ್ಯತ್ಯಾಸವನ್ನು ಗುರುತಿಸಬೇಕಾಗುತ್ತದೆ. ವೈದಿಕರ ಸಂಸ್ಕೃತಿಯನ್ನು, ಜಾತಿ ವ್ಯವಸ್ಥೆಯನ್ನು ಭಂಜಿಸಿ ಜಾತಿಗೆ ಹೊಸ ವ್ಯಾಖ್ಯಾನವನ್ನು ಶರಣರು ನೀಡಿದರು. ಆದರೆ ವೈಷ್ಣವ ಧರ್ಮ ಆ ವ್ಯವಸ್ಥೆಯ ಒಳಗೇ ಅಂತ್ಯಜನ ಮೇಲ್ಮುಖ ಚಲನೆಗೆ ಅವಕಾಶ ಮಾಡಿಕೊಟ್ಟು ಬ್ರಾಹ್ಮಣೀಕರಿಸುವ, ವೈದಿಕ ಸಂಸ್ಕೃತಿಗೆ ಕಟ್ಟಿ ಹಾಕುವ ಕೆಲಸವನ್ನು ಮಾಡಿತು. ಅವನು ಯಾವ ಜಾತಿ, ಪಂಗಡಕ್ಕೆ ಸೇರಿರಲಿ ವೈಷ್ಣವ ಭಕ್ತನಾಗಿ ಭಗವಂತನಿಗೆ ಶರಣಾಗಿ ಮುಕ್ತಿಗೆ ಯೋಗ್ಯನಾಗಬಹುದಿತ್ತಷ್ಟೇ. ಒಟ್ಟಿನಲ್ಲಿ ವೈಷ್ಣವ ಧರ್ಮ ಸರ್ವಜಾತಿಗೂ ದೀಕ್ಷೆಯ ಅವಕಾಶ ನೀಡುವ ಮೂಲಕ ಸಮಾಜಮುಖಿಯಾಗಿತ್ತಾದರೂ ಅದು ವೈದಿಕಸಂಸ್ಕೃತಿಯ ವರ್ಣಚೌಕಟ್ಟನ್ನು ಒಡೆಯುವಲ್ಲಿ ವಿಫಲವಾಯಿತೆಂದೇ ಹೇಳಬೇಕಾಗುತ್ತದೆ.

ಕಲ್ಯಾಣದ ಕ್ರಾಂತಿಯನಂತರ ಕಲ್ಯಾಣದಿಂದ ಶರಣರು ನಾನಾದಿಕ್ಕಿಗೆ ಚದುರಿಹೋದದ್ದು ವೀರಶೈವಧರ್ಮದ ಪ್ರಸ'ರಣ ಮತ್ತು ಪರಿವರ್ತನೆಯ ದೃಷ್ಟಿಯಿಂದ ಮಹತ್ವವಾದುದು. ಕಲಚುರಿಗಳ ಪತನಾನಂತರ ಆಶ್ರಯವನ್ನು ಹುಡುಕುತ್ತಾ ಅದಿಕಾರಿಗಳು, ಕವಿ, ಕಲಾವಿದರ ಕುಟುಂಬಗಳು ಹೊಯ್ಸಳ ನಾಡಿಗೆ ವಲಸೆ ಬಂದಂತೆ ವೀರಶೈವ ಧರ್ಮವೂ ದಕ್ಷಿಣದಲ್ಲಿ ಬೇರು ಬಿಡತೊಡಗಿತು. ದಕ್ಷಿಣ ಕರ್ನಾಟಕದಲ್ಲಿದ್ದ ಶ್ರೀವೈಷ್ಣವ ಧರ್ಮದ ತೀವ್ರ ಪೈಪೋಟಿಯ ಮಧ್ಯೆ ಪ್ರಬಲರಾಗಿದ್ದ ಕಾಳಾಮುಖರ ನಡುವೆ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಸವಾಲಿಗೆ ವೀರಶೈವ ಧರ್ಮ ಸಿಕ್ಕಿಕೊಂಡಿತು. ಶೈವನಿಷ್ಠೆ ಸರಳ ಭಕ್ತಿಮಾರ್ಗವನ್ನು ಗಟ್ಟಿಯಾಗಿ ಹಿಡಿದು, ನಾನಾ ಬಗೆಯ ಸಮನ್ವಯ ಒಡಂಬಡಿಕೆಗಳನ್ನು ಮಾಡಿಕೊಳ್ಳುತ್ತ, ತನ್ನ ಜನಪರ ಧೋರಣೆಯಿಂದ ಹೆಚ್ಚು ಪ್ರಭಾವಶಾಲಿಯಾಗಿ ಬೆಳೆಯತೊಡಗಿತು. ತಳತೊರೆ ಎಂಬ ಗ್ರಾಮದ ಶಾಸನವೊಂದು[೯]

ರಾಮಗುರುಗಳ ಮಗ ಕಲ್ಲಯ್ಯನ ವೀರ ಮರಣವನ್ನು ಹೊಗಳುತ್ತ, ಅವನನ್ನು ಶಿವಶರಣ ದೀಕ್ಷೆಪುತ್ರನು ಹರಗಣಂಗಳ ಬ್ರಿಂಗಿ ಈಶದಾಸರ ದಾಸನೆಂದು ಕರೆದು ಧರೆಯ ಜನ ಹೊಗಳುವಂತೆ, ನಂದಿನಾಥ, ವೀರಭದ್ರ ಮೆಚ್ಚುವಂತೆ ಹೋರಾಡಿ ಮಡಿದನೆಂದಿದೆ. ಅದೇ ಗ್ರಾಮದಲ್ಲಿ ರಾಮನಾಥ ದೇವಾಲಯವಿದ್ದು, ಅದನ್ನು ಕಾಳಾಮುಖ ಕರಿಯ ಜೀಯರ ಮಗನಿಗೆ ನೀಡಲಾಗಿತ್ತು.[೧೦] ಈ ರಾಮನಾಥ ದೇವಾಲಯಕ್ಕೆ ಹೊಂದಿಕೊಂಡಂತೆ ಮಠವೊಂದಿದ್ದು, ಅಲ್ಲಿದ್ದ ರಾಮಗುರುಗಳು ಕಲ್ಲಯ್ಯನಿಗೆ ದೀಕ್ಷೆ ನೀಡಿದ್ದರೆಂದು ಊಹಿಸಬಹುದು. ಈ ಶಾಸನದಲ್ಲಿ ಬಳಸಲಾಗಿರುವ ವೀರಶೈವ ಪಾರಿಭಾಷಿಕ ಪದಗಳು, 'ಸುರಕನ್ನಿಕೆಯ ಮೆಚ್ಚುಗೆಯ ಬದಲಾಗಿ ನಂದಿನಾಥ, ವೀರಭದ್ರದ ಮೆಚ್ಚುಗೆಗೆ ಶಿವಶರಣ ಕಲ್ಲಯ್ಯ ಪಾತ್ರನಾದ' ಎಂಬ ಅಭಿವ್ಯಕ್ತಿಯು ಸ್ಪಷ್ಟವಾಗಿ ವೀರ ಸ್ವರ್ಗದಬದಲಾಗಿ ವೀರಶೈವ ಧರ್ಮದ ಪ್ರಭಾವವನ್ನು ಎತ್ತಿ ತೋರಿಸುತ್ತದೆ. ೧೨೭೮ರ ಕಾಲಕ್ಕಾಗಲೇ ವೀರಶೈವ ಧರ್ಮವು ದಕ್ಷಿಣ ಕರ್ನಾಟಕದಲ್ಲೂ ಮಠಮಾನ್ಯ ವ್ಯವಸ್ಥೆಯನ್ನು ಹೊಂದಿದ್ದು ವೀರಪಡೆಗಳು ಖಾಸವೀರರು ವೀರವೃತ್ತಿಪರರನ್ನು ತನ್ನತ್ತ ಸೆಳೆದು ಪ್ರಭಾವ ಬೀರುತ್ತಿತ್ತೆಂಬುದನ್ನು ಊಹಿಸಬಹುದು.

ವೀರಶೈವ ಧರ್ಮವು ತಂದ ಮುಖ್ಯ ಪಲ್ಲಟಗಳಲ್ಲಿ ರಾಜಭಕ್ತಿಗೆ ಬದಲಾಗಿ ಶೈವಭಕ್ತಿ, ಚಕ್ರವರ್ತಿಗೆ ಬದಲಾಗಿ ಶಿವನನ್ನು ಹಾಗೂ ಭಕ್ತರನ್ನು, ಅರಸರ ದಿಗ್ವಿಜಯದ ಬದಲಾಗಿ ಭಕ್ತನ ಸಾಧನೆಯನ್ನು ಎತ್ತಿ ಹಿಡಿದದ್ದು ಪ್ರಮುಖವಾದದು. ಬೆಂಡೆಕೆರೆಯ ಶಾಸನದಲ್ಲಿ ಇದನ್ನು ಗಮನಿಸಬಹುದು.[೧೧] "ಶ್ರೀ ವೀರಪ್ರತಾಪ ಶ್ರೀಮನು ಮಹಾಲಿಂಗ ಚಕ್ರವರ್ತಿ ಶ್ರೀಮಲ್ಲಿಕಾರ್ಜುನ ದೇವರ ದಿವ್ಯ ಶ್ರೀಪಾದಪದ್ಮಾರಾಧಕರಾದ ಭಿಕ್ಷಾವೃತ್ತಿ ಅಯ್ಯನವರು ಬೆಂಡೆಕೆರೆಯ ಶಿವಸ್ಥಳಗಳಿಗೆ ಗಣಾಚಾರದ ಹಣಕಾಸನು..." ಇತ್ಯಾದಿ ಹೇಳಿದೆ.

ಜೈನಧರ್ಮವು ಎಕ್ಕೋಟಿ ಜಿನಾಲಯಗಳ ಮೂಲಕ ಶೈವರೊಂದಿಗೆ ಒಡಂಬಡಿಕೆ ಮಾಡಿಕೊಂಡು, ಉಳಿದುಕೊಳ್ಳುವ ಪ್ರಯತ್ನ ಮಾಡುತ್ತಿರುವಾಗಲೇ ಉಗ್ರನರಸಿಂಹ ಮತ್ತು ವೀರಭದ್ರದೇವತೆಗಳ ಪ್ರತಾಪ, ಪ್ರಭಾವಗಳು ಹೆಚ್ಚತೊಡಗಿದವು. ಅವುಗಳ ಅವತಾರದ ಕಥೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ಎರಡೂ ದೇವತೆಗಳು ಮಧ್ಯಕಾಲೀನ ಕರ್ನಾಟಕದಲ್ಲಿ ಮತಧರ್ಮ ಸಂಘರ್ಷದ ಸಂಕೇತಗಳೇ ಆಗಿವೆ. ದುಷ್ಟಶಕ್ತಿಗಳನ್ನು (ಅನ್ಯ ನಂಬಿಕೆ ಧರ್ಮಗಳನ್ನು) ಸಂಹರಿಸಲೆಂದೇ ಅವುಗಳ ಅವತಾರವಾಯಿತೆಂದು, ಅವುಗಳಿಗೆ ಪ್ರಾಧಾನ್ಯತೆಯಿತ್ತು. ಅಸಂಖ್ಯ ದೇವಾಲಯಗಳು ಅವುಗಳಿಗಾಗಿ ನಿರ್ಮಾಣವಾಗತೊಡಗಿದವು. ಕಾವ್ಯಗಳು ರಚನೆಗೊಂಡವು. ಇದು ಸಂಘರ್ಷವನ್ನು ತೀವ್ರಗೊಳಿಸಿತು. ಹಾಗಾಗಿ ಪ್ರತಿಯೊಂದು ಧರ್ಮಕ್ಕೂ ತನ್ನ ರಕ್ಷಣೆಯು ತುಂಬ ಮುಖ್ಯವೆನಿಸಿದ್ದರಿಂದ ಕೇವಲ ರಕ್ಷಕ ದೇವತೆಗಳಷ್ಟೇ ಅಲ್ಲದೆ ವೀರಪಡೆಗಳ ವೀರವೃತ್ತಿಯವರನ್ನು ತಮ್ಮ ತಮ್ಮ ಧರ್ಮಗಳ ಒಕ್ಕಲಾಗಿಸಬೇಕಾದ ಅನಿವಾರ್ಯತೆ ಉಂಟಾಯಿತೆನ್ನಬಹುದು.

ವಿಷ್ಣುವರ್ಧನ ಹಾಗೂ ರಾಮಾನುಜರ ಕಾರಣದಿಂದ ಶ್ರೀವೈಷ್ಣವಧರ್ಮ ಹಾಗೂ ತಮಿಳುನಾಡಿನೊಂದಿಗಿನ ಸಂಪರ್ಕ ಬೆಳೆಯತೊಡಗಿತು. ಇಮ್ಮಡಿ ವೀರಬಲ್ಲಾಳ ಅವನ ಮಕ್ಕಳಾದ ಇಮ್ಮಡಿ ನರಸಿಂಹ ಮತ್ತು ಸೋವಲೆಯರ ಕಾರಣದಿಂದ ಹೊಯ್ಸಳ ರಾಜ್ಯದ ಗಡಿ ತಮಿಳುನಾಡಿನಲ್ಲಿ ವಿಸ್ತರಿಸಿ, ವೈವಾಹಿಕ ಸಂಬಂಧಗಳೂ ಏರ್ಪಟ್ಟವು. ಧಾರ್ಮಿಕಸಂಬಂಧವು ರಾಜಕೀಯಾರ್ಥಿಕ ಸಂಬಂಧವಾಗಿ ಬೆಳೆಯತೊಡಗಿತು. ಪ್ರಾರಂಭದ ಹಂತದಲ್ಲಿ ಹೊಸ ಅಗ್ರಹಾರಗಳು ನಿರ್ಮಾಣಗೊಂಡವಾದರೂ ನಂತರದ ಕಾಲದಲ್ಲಿ ಹೆಚ್ಚಿನ ವೈಷ್ಣವ ಜನಸಂಖ್ಯೆಯ ಕಾರಣದಿಂದ, ಅನೇಕ ಗ್ರಾಮಗಳನ್ನು ಕೇಶವಪುರ, ನರಸಿಂಹಪುರಗಳಾಗಿ ಪರಿವರ್ತನೆಗೊಳಿಸಲಾಯಿತು. ಈ ಅಗ್ರಹಾರಗಳಲ್ಲಿ, ಗ್ರಾಮಗಳಲ್ಲಿ ಆ ಹೊತ್ತಿಗಾಗಲೇ ಜೈನಮಂದಿರಗಳು, ಶೈವರ ಮಂದಿರಗಳು, ಮಠಗಳೂ ಇದ್ದುವು, ಕೆಲವುಬಾರಿ ಶೈವಬ್ರಾಹ್ಮಣರಿಗೂ ವೈಷ್ಣವರಿಗೂ ಅಗ್ರಹಾರಗಳಲ್ಲಿ ಒಟ್ಟಾಗಿ ಬಿಟ್ಟಂತಹ ವೃತ್ತಿಗಳನ್ನು, ದಾನಗಳನ್ನು ಹಂಚಿಕೊಂಡು ಬದುಕಬೇಕಾಗಿತ್ತು.

ಮೊದಲ ಹಂತದಲ್ಲಿ ಶೈವರ ಪ್ರಾಬಲ್ಯದಲ್ಲಿ ವೈಷ್ಣವರು ಹೊಂದಿಕೊಂಡು ಬದುಕುತ್ತಿದ್ದರು. ಆದರೆ ಕ್ರಮೇಣ ಹೆಚ್ಚಿದ ಒಳವಲಸೆ, ಅವರಿಗೆ ದೊರೆತ ರಾಜಾಶ್ರಯ, ದಾನದತ್ತಿಗಳಿಂದ

ವೈಷ್ಣವರು ಪ್ರಬಲರಾಗತೊಡಗಿದರು. "ವೈಷ್ಣವ ದೀಕ್ಷೆ ಮತಾಂತರಗಳಿಂದ ಭಿನ್ನಭಿನ್ನ ಅಭಿರುಚಿ ಪ್ರವೃತ್ತಿಗಳ ಜನರ ಮಿಶ್ರಣ ಉಂಟಾಯಿತು. ತಮಿಳುನಾಡಿನಲ್ಲಿದ್ದ ಶೈವ, ವೈಷ್ಣವಮತದ ವೈಷಮ್ಯ ಕ್ರಮೇಣವಾಗಿ ಕರ್ನಾಟಕದಲ್ಲೂ ಇವರ ವೈಷಮ್ಯಕ್ಕೆ ಕಾರಣವಾಯಿತೆನ್ನಬಹುದು.[೧೨] ಅಗ್ರಹಾರದ ದೇವಭೂಮಿಗಳಿಗೆ ಸಂಬಂಧಿಸಿದ ನೀರಿನಪಂಥ ಮತದ್ವೇಷ[೧೩] ಶೈವಸ್ಥಾನಿಕರಿಗೂ ಮಹಾಜನರಿಗೂ ನಡುವೆ ಎದ್ದ ದೇವಭೂಮಿಗಳ ಜಗಳ[೧೪] ಶೈವಸ್ಥಾನ ಮತ್ತು ವೈಷ್ಣವಸ್ಥಾನಗಳು, ದೇವಾಲಯಭೂಮಿ, ತೋಟಗಳ ಉಳುಮೆ ಇತ್ಯಾದಿಗಳಿಗೆ ಸಂಬಂದಿಸಿದ ವೈಮನಸ್ಯ, ಹೊಸನಿಬಂಧನೆಗಳು ಮತದ್ವೇಷವನ್ನೇ ಸಾರುತವೆ. ಸಮಾಜದ ತಳಸ್ತರದಲ್ಲಿ, ಅಂಚಿನಲ್ಲಿ ನಿಂತವರಿಗೆ, ಹೀನಾಯ ಸ್ಥಿತಿಗೆ ತಳ್ಳಲ್ಪಟ್ಟ ಸ್ತ್ರೀಯರಿಗೆ ಒಂದು ಅಸ್ಮಿತೆಯನ್ನು ಶೈವ ಧರ್ಮ ಒದಗಿಸಿಕೊಡುವ ಪ್ರಯತ್ನ ಮಾಡಿತು. ಸಹಸ್ರ ಸಂಖ್ಯೆಯಲ್ಲಿ ಜನ ಈ ಧರ್ಮವನ್ನು ಸ್ವೀಕರಿಸಿದರು. ಜೈನ ಸಮಾಜದಿಂದ ದೊಡ್ಡ ಗುಂಪು ವೀರಶೈವ ಧರ್ಮದೆಡೆಗೆ ಆಕರ್ಷಿತವಾಯಿತು. ಈ ಮತಾಂತರಗಳು ಹೊಸ ಸಮಾಜ ವ್ಯವಸ್ಥೆಗೆ ಕಾರಣವಾಯಿತು.

ವೀರಶೈವ ಧರ್ಮವು ಆರಂಭದಲ್ಲಿ ಸಾಮಾಜಿಕ ಸಮಸ್ಯೆಗಳ ಕಡೆಗೆ, ಅವುಗಳ ಪರಿಹಾರದ ಕಡೆಗೆ ಮುಖ ಮಾಡಿತ್ತು. ಪಾರಲೌಖಿಕ ಸುಖಕ್ಕೆ, ಮುಕ್ತಿಗೆ ಮೊದಲು ಈ ಲೋಕದಲ್ಲಿನ ಹಸನಾದ ಬದುಕಿಗೆ ಒತ್ತು ನೀಡಲಾಯಿತು. ಕಾಯಕ ನಿಷ್ಠೆಯು ವ್ಯಕ್ತಿಯ ಆರ್ಥಿಕ ಸ್ವಾತಂತ್ರ್ಯಕ್ಕೆ ದಾರಿ ಮಾಡಿಕೊಡುವುದರ ಮೂಲಕ ಆತ್ಮಾಭಿಮಾನವನ್ನು ಒಂದು ಅಸ್ಮಿತೆಯನ್ನು ಸಮಾಜದಲ್ಲಿ ಪಡೆಯಲು ಅವಕಾಶ ಮಾಡಿಕೊಟ್ಟಿತು. ರಾಜಕೀಯ ಪ್ರಭುತ್ವವನ್ನೂ ಧಾರ್ಮಿಕ ಪ್ರಭುತ್ವವನ್ನು ಒಟ್ಟಿಗೇ ವಿರೋದಿಸುತ್ತ ವ್ಯಕ್ತಿಸ್ವಾತಂತ್ರ್ಯಕ್ಕೆ ಗಮನ ಹರಿಸಿತು. ಅತಿಯಾದ ಅರ್ಥಸಂಚಯವನ್ನು ಖಂಡಿಸಿ ದಾಸೋಹದ ತತ್ವವನ್ನು ಅಳವಡಿಸಿಕೊಳ್ಳಲು ಪ್ರೇರಣೆ ನೀಡಿತು. ಸಮಾಜದ ಕ್ರೂರವಾದ ವರ್ಣ ವ್ಯವಸ್ಥೆಯನ್ನು ಒಡೆಯುವ ವೀರಶೈವರ ಪ್ರಯತ್ನವು ವೈದಿಕರಲ್ಲಿ ಅಸಹನೆಯನ್ನು ಎಬ್ಬಿಸಿತು. ಈ ವಿಪ್ಲವದಿಂದ ಕಲ್ಯಾಣದ ಅನುಭವ ಮಂಟಪ ವಿಘಟನೆಗೊಂಡಿತು. ಅಲ್ಲಿದ್ದ ಶರಣ ಸಮೂಹ ಚದುರಿ, ಹತ್ತು ಹಲವು ದಿಕ್ಕಿಗೆ ಹರಿದುಹಂಚಿಹೋಯಿತು. ಅನ್ಯ ಧರ್ಮಗಳ ಪೈಪೋಟಿಯಲ್ಲಿ ಗೆಲ್ಲಬಹುದಾದ ಅನೇಕ ದಾರಿಗಳಲ್ಲಿ ಈ ವೀರಮಹೇಶ್ವರ' ತಂಡಗಳು ಹುಟ್ಟಿಕೊಂಡು ತಮ್ಮ ದೇವಾಲಯಗಳು ತಮ್ಮ ಶಿವಪುರಗಳ ರಕ್ಷಣೆಯ ಅವುಗಳ ಆಸ್ತಿಪಾಸ್ತಿಗಳ ರಕ್ಷಣೆ, ಸಮಯಾಚಾರಗಳ ರಕ್ಷಣೆಗಾಗಿ ವೀರ ಮಾಹೇಶ್ವರು ದೀಕ್ಷಿತರಾದರು. ತನ್ನ ಉಳಿವಿಗಾಗಿ ಅನೇಕ ಮೂಲ ತತ್ವಗಳು, ಮೌಲ್ಯಗಳನ್ನು ಬದಲಾಯಿಸಿಕೊಂಡು ದೇವಾಲಯ ನಿರ್ಮಾಣ, ಮೂರ್ತಿ ಪೂಜೆ ದಾನದತ್ತಿಗಳ ಸ್ವೀಕಾರ, ಶಿವಪುರಗಳ ನಿರ್ಮಾಣಗಳಿಗೆ ವೀರಶೈವಧರ್ಮವು ಅವಕಾಶ ನೀಡಿತು.

ಶ್ರೀ ವೈಷ್ಣವ ಧರ್ಮವು "ಮನುಷ್ಯ ಜನ್ಮವೇ ಸರ್ವಶ್ರೇಷ್ಠ ಮತ್ತು ಜನ್ಮಾಂತರ ವಿಕಾಸದಲ್ಲಿ ತುಟ್ಟ ತುದಿಯದು. ಇಲ್ಲಿಂದ ಎಂದಿಗೂ ನಾಶವಿಲ್ಲದ ಶಾಶ್ವತವಾದ ಜ್ಞಾನಾನಂದ ಮಯವಾದ ವೈಕುಂಟ ಸೇರುವುದೇ ಮೋಕ್ಷದ ಸ್ಥಿತಿ" ಎಂದು ಸಾರಿತು. ಹಲವು 'ಯೋಗ'ಗಳನ್ನು ಅನುಸರಿಸಬೇಕಾಗಿಲ್ಲ ಶ್ರೀಮನ್ನಾರಾಯಣನಲ್ಲಿ ಪ್ರಪತ್ತಿ ಅಥವಾ ಶರಣಾಗತಿಯಾಗುವುದು ಅತ್ಯಂತ ಸುಲಭ ಉಪಾಯ. ಜೀವನು ಸಂಪೂರ್ಣವಾಗಿ ಪರಮಾತ್ಮನಲ್ಲಿ ಶರಣಾದರೆ ಅವನ ಹೊರೆ ಆ ಭಗವಂತನದು. ಅವನು ಮೋಕ್ಷವನ್ನು ಕರುಣಿಸುತ್ತಾನೆ ಜಗತ್ತಿಗೆ ಮಾತಪಿತೃಗಳಾದ ಲಕ್ಷ್ಮೀನಾರಾಯಣರು ಅಭಯ ನೀಡುತ್ತಾರೆ. "ಒಂದು ಬಾರಿ ನನ್ನಲ್ಲಿ ಪ್ರಪತ್ತಿಯನ್ನು ಮಾಡಿದರೆ, ಎನ್ನವನೆಂದು ಯೋಚಿಸುವ ಸರ್ವಭೂತಗಳಿಗೂ ಅಭಯವನ್ನು ಕೊಡುತ್ತೇನೆ"[೧೫] ಅಂದರೆ ಸಮಸ್ತ ಉಪಾಯಗಳನ್ನು (ಅನ್ಯ, ಧರ್ಮ, ದೇವೋಪಾಸನೆ) ಬಿಟ್ಟು ನನೊಬ್ಬನಲ್ಲಿಯೇ ಶರಣಾದರೆ ನಾನು ನಿನ್ನನ್ನು ಸಮಸ್ತ ಪಾಪಗಳಿಂದಲೂ ಮುಕ್ತನನ್ನಾಗಿಸುತ್ತೇನೆ" ಎಂಬವಿಚಾರಗಳನ್ನು ಕೇಳಿದಾಗ ಜನರಿಗೆ ಜ್ಞಾನ, ಭಕ್ತಿ, ಯಜ್ಞ, ಕರ್ಮ ಯೋಗಗಳಿಗಿಂತ ಈ ಶರಣಾಗತಿ ಯೋಗವೇ ಅತ್ಯಂತ ಸುಲಭೋಪಾಯವೆನಿಸಿತು. ತನ್ನದೇನೂ ಇಲ್ಲವೆನ್ನುವ ದೈನ್ಯತೆ, ನಾನು ನಾನಲ್ಲ ಎಲ್ಲವೂ ನಿನ್ನದು ಎಂಬ ಸರ್ವ ಸಮರ್ಪಣಾ ಸ್ಥಿತಿಯು ಜನ ಮನ್ನಣೆ ಪಡೆಯಿತು. "ಮೋಕ್ಷ ಪಡೆಯಲು ಹಲವು ಜನ್ಮಗಳನ್ನು ಅನುಭವಿಸಬೇಕಾಗುತ್ತದೆ! ಪಾಪಶೇಷಗಳು ಕಳೆಯುವವರೆಗೂ ಜೀವಕ್ಕೆ ಮುಕ್ತಿಯಿಲ್ಲ ಅಲ್ಲಿಯವರೆಗೆ ಸಾಧನೆ ಮಾಡುತ್ತಲೇ ಇರಬೇಕು" ಎಂಬ ತತ್ವಗಳ ಮುಂದೆ 'ಪ್ರಪತ್ತಿ'ಯ ಪರಿಕಲ್ಪನೆ ಅತ್ಯಂತ ಸರಳವಾಗಿ ಕಂಡುಬಂದಿತು.

**ತಳ ಸಮುದಾಯ ಮತ್ತು ಶ್ರೀ ವೈಷ್ಣವ ಧರ್ಮ.**

ವಿಶೇಷವಾಗಿ ಪ್ರಭಾವಿಸಿದ ಶ್ರೀ ವೈಷ್ಣವ ಧರ್ಮದ ಮತ್ತೊಂದು ಅಂಶ "ಎಲ್ಲರಿಗೂ ಮುಕ್ತಿಗೆ ದಾರಿಯಿದೆ" ಎಂಬ ವಿಚಾರ. ರಾಮಾನುಜರು ಬಹಳ ಉದಾರ ಮನೋಭವದವರಾಗಿದ್ದುದರಿಂದ ಯಾವ ತಳಸಮುದಾಯವನ್ನು ಸಮಾಜ ದೂರವಿಟ್ಟಿದ್ದಿತೋ, ಅಂಥವರಿಗೂ ದಾಸ ದೀಕ್ಷೆ ನೀಡಿದ್ದು ಮತ್ತು ಅವರಿಗೆ ಧರ್ಮಾಚರಣೆಯಲ್ಲಿ ಒಂದು ಐಡೆಂಟಿಟಿಯನ್ನು ಕೊಟ್ಟಿದ್ದು ಮಹತ್ವದ್ದು. ಈ ಅವಕಾಶದಿಂದ ತಳಸಮುದಾಯಕ್ಕೆ ಮಹತ್ವವಾದದ್ದೇನೋ ದೊರಕಿತೆಂದು ಹೇಳುತ್ತಿಲ್ಲ. ಆದರೆ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಯಾವುದೇ ಪ್ರದೇಶ/ಪರಿಸರಕ್ಕೆ ಯಾವುದೇ ವ್ಯಕ್ತಿ ಬಾಹಿರನೆಂಬುದೇ ಅನ್ಯಾಯವಲ್ಲವೇ?

ಶ್ರೀ ವೈಷ್ಣವ ಮತದ ಪ್ರಚಾರಕ್ಕೆ ತೊಡಗಿದಾಗ ಆಚಾರ್ಯರು ಜೈನ ಮತ್ತು ಶೈವ ಮತ ಮುಂತಾದ ಅನ್ಯ ಧರ್ಮಾಚರಣೆಗಳಿಗೆ ಸೇರಿದವರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಬೇಕಾಯಿತು. ಇದನ್ನು ಸಾಧಿಸಲು ಅನ್ಯ ಮತಸ್ಥರಿಗೆ "ಶ್ರೀ ವೈಷ್ಣವ ಪಂಚ ಸಂಸ್ಕಾರ'ಗಳಾದ ತಪ, ಪುಂಡ್ರ, ನಾಮ ಮಂತ್ರ, ಯಜ್ಞ ಇವುಗಳ ದೀಕ್ಷೆ ನೀಡಲಾಗುತ್ತಿತ್ತು.[೧೬] ರಹಸ್ಯ ಮಂತ್ರಗಳನ್ನು ಇತರರಿಗೆ ಗಟ್ಟಿಯಾಗಿ ಹೇಳಬಾರದೆಂಬ ನಿಯಮವಿತ್ತು.[೧೭] ಎಲ್ಲರಿಗೂ ಉಪದೇಶ ಮಾಡುವಂತಿರಲಿಲ್ಲ. ಇವುಗಳನ್ನು ಭಕ್ತನಾದವನು ಪ್ರತಿನಿತ್ಯ, ಪ್ರತಿಕ್ಷಣ ಅನುಸಂಧಾನ ಮಾಡಬೇಕು ಎಂಬ ನಿಯಮವಿತ್ತು. ಆದರೆ ರಾಮಾನುಜರು ಗಿರಿಯ ಮೇಲೆ ನಿಂತು ಎಲ್ಲ ಜನರಿಗೂ ತಿಳಿಯುವಂತೆ ಮಂತ್ರಗಳನ್ನು ಉದ್ಘೋಷ ಮಾಡಿ (ಹಾಗೆ ಮಾಡಿದರೆ ತಲೆ ಸಿಡಿದು ಚೂರಾಗುವುದೆಂಬ ಮಾತಿದ್ದರೂ) ಇದರ ಪ್ರಯೋಜನವು ಸಾಮಾನ್ಯ ಜನರಿಗೂ ಸಿಗಲೆಂದು ಪ್ರಚಾರಮಾಡಿದರೆಂದು ತಿಳಿದುಬರುತ್ತದೆ. ಸಾಂಸ್ಕೃತಿಕ ಕೇಂದ್ರಗಳಾಗಿದ್ದ ದೇವಾಲಯಗಳ ಪೂಜಾ ಕೈಂಕರ್ಯ ಆಚರಣೆ ಉತ್ಸವಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದು ತಳ ಸಮುದಾಯಗಳಿಗೂ ಈ ಕೈಂಕರ್ಯದಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟರು, ದೇವಲಯಗಳಿಗೆ ಪ್ರವೇಶ ಕೊಟ್ಟರೆಂಬ ವಿಚಾರ ಇದೆ. ಈಗಲೂ ವರ್ಷದಲ್ಲಿ ನಿರ್ದಿಷ್ಟವಾದ ಮೂರು ದಿನಗಳಲ್ಲಿ ಮೇಲುಕೋಟೆಯ ದೇವಾಲಯದೊಳಗೆ ನಿರ್ದಿಷ್ಟ ದೂರದವರೆಗೆ ಪ್ರವೇಶವನ್ನು ಕೊಡಲಾಗುತ್ತದೆ. ತಿರುಪತಿಯಲ್ಲಿ ಎಲ್ಲರಿಗೂ ದೇವರ ದರ್ಶನಕ್ಕೆ ಅವಕಾಶವಿರುವುದು ತಿಳಿದೇಯಿದೆ.

ಇಂತಹ ಒಂದು 'ಲಿಬರಲ್ ಥಿಂಕಿಂಗ್' ಅಷ್ಟು ಸುಲಭವಾಗಿ ಬರುವುದಲ್ಲ. ಅದು ಸಾಧ್ಯವಾಗಲು ಕಾರಣ ಆಳ್ವಾರರುಗಳ

ಚಿಂತನೆ. ಶ್ರೀ ವೈಷ್ಣವ ಧರ್ಮದ ಆಧಾರವಾದ ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ ಭಗವದ್ಗೀತೆಗಳೊಂದಿಗೆ ವಿಭಿನ್ನವಾದ ದ್ರಾವಿಡ ಸಂಸ್ಕೃತಿಯ ಆಳ್ವಾರರುಗಳ 'ಸ್ತುತಿರೂಪದ ಸುಮಾರು ನಾಲ್ಕು ಸಾವಿರಪಾಶುರಗಳು' ಸೇರಿಕೊಂಡದ್ದು ವಿಶೇಷ. ಆಳ್ವಾರರು ಸಾಮಾನ್ಯ ಜನವರ್ಗದ ಪ್ರತಿನಿಧಿಗಳಾಗಿದ್ದು ಇವರಲ್ಲಿ ವೈದಿಕವಲ್ಲದೆ ಇತರ ಜಾತಿಯವರೂ–ಅಂತ್ಯಜರೂ, ಕ್ಷತ್ರಿಯರೂ, ಮಹಿಳೆಯರೂ ಇದ್ದದ್ದು ಗಮನಾರ್ಹ ವಿಚಾರ. ಧರ್ಮೋಪದೇಶ ಮತ್ತು ದೈವ ಸಾಕ್ಷಾತ್ಕಾರ ಕೇವಲ ವೇದ ಪಾರಂಗತರಿಗೆ ಮಾತ್ರ ಎಂಬ ಆರ್ಯ ಚಿಂತನೆಯ ಸಿದ್ಧಹೇಳಿಕೆಯನ್ನು ಬದಲಾಯಿಸಿದ ಸ್ಥಿತಿಗೆ ಮತ್ತು ಧರ್ಮದ ಹೊಸ ವ್ಯಾಖ್ಯಾನಕ್ಕೆ ಇದು ದಾರಿ ಮಾಡಿಕೊಟ್ಟಿತು. ಶ್ರಿ ವೈಷ್ಣವ ಆಚಾರ್ಯರಾದ ನಾಥಮುನಿಗಳು ಈ ಪಾಶುರಗಳನ್ನು ಸಂಗ್ರಹಿಸಿದರು, ಯಮುನಾಚಾರ್ಯರು ಭಗವದಾರಾಧನೆಯಲ್ಲಿ ನಿತ್ಯ ಪಾರಾಯಣದಲ್ಲಿ ಇವುಗಳನ್ನು ಅಳವಡಿಸಿದರು. ರಾಮಾನುಜರು ಇದನ್ನು ಜನಮತವನ್ನಾಗಿ ಪರಿವರ್ತಿಸಿದರು. ವೇದಾಂತ, ಶಾಸ್ತ್ರಜ್ಞಾನದ ಸಂಪ್ರದಾಯದ ಜೊತೆಗೆ ಆಳ್ವಾರರ ಭಕ್ತಿ ಸಂಪ್ರದಾಯವನ್ನು ಸೇರಿಸಿ(ಉಭಯವೇದಾಂತ) ದೇವ–ಜೀವರನ್ನು ಒಂದುಗೂಡಿಸಿ ವಿಶಿಷ್ಟಾದ್ವೈತ ಸಿದ್ಧಾಂತವಾಗಿ ಸ್ಥಾಪಿಸಿ ಜನಪ್ರಿಯಗೊಳಿಸಿದರು.

ತಿರುಪತಿ, ಮೇಲುಕೋಟೆಗಳು ವೈಷ್ಣವ ಕೇಂದ್ರಗಳಾಗಿ ಬೆಳೆದವು. ತಮಿಳುನಾಡು, ಕರ್ನಾಟಕ, ಆಂದ್ರ ಆಡಳಿತ ಭಾಗಗಳನ್ನು ಧರ್ಮದ ಹಿನ್ನೆಲೆಯಲ್ಲಿ ಬೆಸೆದರು. ಇವತ್ತಿಗೂ ಅವು ಬೆಸೆದುಕೊಂಡಿವೆ. ಭಗವಂತನಿಗೆ ಭಕ್ತನು ಮಾಡಿಕೊಳ್ಳಬಹುದಾದ ಸೇವೆ, ವಾತ್ಸಲ್ಯ, ಸತಿಪತಿಭಾವ, ತ್ಯಾಗ ಎಲ್ಲವನ್ನು ನೀಡುವುದು ಶರಣಾಗತಿ, ಸಖಭಾವ, ನಾಮಸ್ಮರಣೆ, ಅನನ್ಯ ಸ್ತುತಿ, ನಿಂದಾಸ್ತುತಿಗಳೆಂಬ 'ನವ ವಿಧದ ಭಕ್ತಿ' ಆತ್ಮ ನಿವೇದನೆಯನ್ನು ತಿಳಿಸಿಕೊಟ್ಟರು. ಈ ಯಾವ ಭಾವವನ್ನು ಹಿಡಿದರೂ ಭಗವಂತನ ಸಾನಿಧ್ಯ ದೊರಕುವುದು ಎಂದರು.

ಈ ವಿಚಾರಗಳು ಹೋರಾಟದ ಬಣಗಳನ್ನು ಆಕರ್ಷಿಸಿತು. ಇವೆಲ್ಲ ಭಾವಗಳಲ್ಲಿ ಸರ್ವ ಸಮರ್ಪಭಾವವು ಗರುಡ, ಹನುಮಂತ, ಲಕ್ಷ್ಮಣರಂತೆ ಕಷ್ಟಗಳನ್ನು ಸಂತೋಷವಾಗಿ ಅನುಭವಿಸುತ್ತ ವಿರಾಮವಿಲ್ಲದೇ ಸೇವೆಗೈಯುತ್ತ ಆನಂದಿಸುವ, ಬದುಕನ್ನು ಸಾರ್ಥಕಗೊಳಿಸಿಕೊಳ್ಳುವ ಭಕ್ತಿಮಾರ್ಗವು ಒಪ್ಪಿತವಾಯಿತು.

ಹಾಗಾಗಿ ವೀರರು, ವೀರಪಡೆಗಳಾದ ಗರುಡರು, ಭೇರುಂಡದ ಮೊತ್ತದ ಕೂಸರು, ಜಟ್ಟಿವೀರರು, ಬೇಡವೀರರು ಈ ಧರ್ಮದ ಪ್ರಭಾವಕ್ಕೆ ವಿಶೇಷವಾಗಿ ಒಳಗಾದರು. ಈ ಧರ್ಮ ರಾಜನ ಮುಖೇನ ಅವನ ಊಳಿಗದವರನ್ನೆಲ್ಲಾ ವ್ಯಾಪಿಸತೊಡಗಿತು. ಒಕ್ಕಲಾಗಿಸುವ ಕಾರ್ಯ ವ್ಯಾಪಕವಾಗಿ ನಡೆಯಿತು.

ಈರೀತಿಯ ಸೇವಾ ಕೈಂಕರ್ಯದ ಪರಿಕಲ್ಪನೆಯು ವೀರರಲ್ಲಿ ಈಗಾಗಲೇ ಇದ್ದ ಕರ್ತವ್ಯ ಪ್ರಜ್ಞೆ ಹಾಗೂ ಋಣಪ್ರಜ್ಞೆಯ ಜೊತೆಗೆ ಪ್ರಪತ್ತಿ ಅಥವಾ ಸಂಪೂರ್ಣ ಶರಣಾಗತಿಯು ಮತ್ತಷ್ಟು ತೀವ್ರವಾಗಿ ಸೇರಿಕೊಂಡಿತು. ಅವರು ಸ್ವಾಮಿನಿಷ್ಠರಾದ ಗರುಡ, ಆಂಜನೇಯರ ವ್ಯಕ್ತಿತ್ವಗಳನ್ನು ಅಪ್ಪಿಕೊಳ್ಳತೊಡಗಿದರು, ಆರಾಧಿಸತೊಡಗಿದರು. ಲೌಕಿಕವಾದ ಒಡೆಯನ ಸೇವೆಗೆ ಒಂದು ಧಾರ್ಮಿಕ ಪರಿವೇಶ ಬರತೊಡಗಿತು. ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಗರುಡನಾದ ಕುವರಲಕ್ಷ್ಮ ಅವನ ಮಡದಿ ಸುಗ್ಗಲೆ ಹಾಗೂ ಅವರಿಬ್ಬರ ಲೆಂಕಿತಿಯರು ಹಾಗೂ ಅಗ್ರಹಾರ ಬಾಚಹಳ್ಳಿಯ ಗಂಡನಾರಾಯಣ ಸೆಟ್ಟಿಯ ಮತ್ತು ಮಾರವ್ವೆ ನಾಯಕಿತಿಯರ ಕುಟುಂಬದ ಇಡೀ ಏಳು ತಲೆಮಾರುಗಳು ಹೊಯ್ಸಳ ಅರಸರಿಗೆ ಗರುಡರಾಗಿ ಪ್ರಾಣತ್ಯಾಗಮಾಡಿರುವುದನ್ನು (ಗಂಡನಾರಾಯಣ ಸೆಟ್ಟಿಯಿಂದ ಆರಂಭಿಸಿ ಕನ್ನೆಯ್ಯನಾಯಕನವರೆಗೆ, ಹೊಯ್ಸಳ ಎರೆಯಂಗನಿಂದ ಆರಂಭಿಸಿ ಮೂರನೇ ನರಸಿಂಹನವರೆಗೆ ಕ್ರಿ.ಶ. ಸುಮಾರು ೧೦೭೫ರಿಂದ ೧೨೯೧ರವರೆಗೆ) ಕಾಣಬಹುದು.[೧೮] ಇಂತಹ ಕುಟುಂಬಗಳಿಗೆ ಅರಸರಿಂದ ಉಂಬಳಿಗಳು, ಮೈಜೀವಿತಗಳು ಗೌರವ ಮಾನ್ಯತೆ ಬಿರುದುಗಳು ದೊರಕುತ್ತಿದ್ದವು. ಇದು ಕೇವಲ ರಾಜರ ಬಂಟರನ್ನಷ್ಟೇ ಅಲ್ಲದೆ ಅವರ ಮಡದಿಯರನ್ನೂ ಅವರ ಸೇವಕರು ಹಾಗೂ ಮಡದಿಯರ ಸೇವಕಿಯರನ್ನೂ ಭಾಷೆ ನೀಡಲು, ಪ್ರಾಣತ್ಯಾಗಮಾಡಲು ಪ್ರೇರೇಪಿಸುತ್ತಿತ್ತೆಂಬುದನ್ನು ಗಮನಿಸಬೇಕು ಈ ರೀತಿ ಆಳುವ ಒಡೆಯನಿಗೆ ತನ್ನ ಪ್ರಾಣಬಲಿದಾನ ಮಾಡುವ ವೀರರನ್ನು 'ಮಹಾವಿಷ್ಣುಭಕ್ತ ಗರುಡ' ಎಂದು ಕರೆದು ಒಂದು ಧಾರ್ಮಿಕ ಆಯಾಮ ನೀಡುವ ಮೂಲಕ ಅವರಲ್ಲಿ ಒಂದು ವಿಶಿಷ್ಟಸಾರ್ಥಕತೆಯ ಭಾವ ಮೂಡಿಸುವ ಪ್ರಯತ್ನ ನಡೆಯತೊಡಗಿತ್ತೆಂಬುದನ್ನು ಗಮನಿಸಬಹುದು. ಈ ಕಾರಣಕ್ಕೆ ಪುರಾಣದ ಗರುಡನಿಗೆ ಅಷ್ಟೊಂದು ಪ್ರಾಮುಖ್ಯತೆ ದೊರೆತು, ವಿಶೇಷ ಪ್ರಚಾರ ಈ ಕಾಲದಲ್ಲಿ ಸಿಕ್ಕಿತು. ಇಂತಹವರನ್ನು ಆದರ್ಶವೆಂದು ವೀರರು, ವೀರ ಪಡೆಗಳು ನಂಬಿಕೊಂಡವು.

**ಭೇರುಂಡದ ಮೊತ್ತದ ಕೂಸರ ಮೇಲೆ ವೈಷ್ಣವ ಧರ್ಮದ ಪ್ರಭಾವ.**

ಹೊಯ್ಸಳರ ಕಾಲದ ಮತ್ತೊಂದು ಹೋರಾಟದ ವೀರಪಡೆ ಭೇರುಂಡದ ಮೊತ್ತದ ಕೂಸರೆಂದೇ ಪ್ರಸಿದ್ಧರಾದವರು. ಇವರ ಮೇಲೆ ಶ್ರೀವೈಷ್ಣವ ಧರ್ಮದ ಪ್ರಭಾವ ವಿಶೇಷವಾಗಿ ನಡೆದಿರುವುದನ್ನು, ಆ ವೀರಪಡೆಯು ಸಾಮೂಹಿಕವಾಗಿ ವೈಷ್ಣವ ದೀಕ್ಷೆ ಪಡೆದುದನ್ನು ಹೇಳುವ ಒಂದು ಶಾಸನ ಚನ್ನರಾಯ ಪಟ್ಟಣದ ನಾಗರ ನವಿಲೆ ಗ್ರಾಮದಲ್ಲಿದೆ. [೧೯]

ಹೊಯ್ಸಳ ವೀರ ಬಲ್ಲಾಳನು ತನ್ನ ಭೇರುಂಡದ ಮೊತ್ತದ ಕೂಸರೆಂಬ ವೀರ ಪಡೆಗೆ ನವಿಲೆ ಎಂಬ ಗ್ರಾಮವನ್ನು ಉಂಬಳಿಯಾಗಿ ನೀಡುತಾನೆ. ಅದನ್ನು ಅವರೆಲ್ಲರೂ ಏಕಮತದಿಂದ ಅಗ್ರಹಾರವಾಗಿ ಮಾಡುತ್ತಾರೆ. ಬಲ್ಲಾಳನ ಮಗ ಹೊಯ್ಸಳ ಇಮ್ಮಡಿ ನರಸಿಂಹನು ತನ್ನ ಆಳ್ವಿಕೆಯಲ್ಲಿ ಕಂಚಿಯನ್ನು ಗೆದ್ದ ಮೇಲೆ ಅಲ್ಲಿ ಯಾವುದೇ ರೀತಿಯ ದಂಗೆಗೆ ಅವಕಾಶವಾಗದಂತೆ ಈ ಭೇರುಂಡದ ಮೊತ್ತದ ಕೂಸುಗಳ ಪಡೆಯು ಕಂಚಿಯಲ್ಲಿಯೇ ಕೆಲಕಾಲ ನೆಲಸಿ ಶಾಂತಿಪಾಲನೆಯ ಕರ್ತವ್ಯವನ್ನು ನಿಭಾಯಿಸುತ್ತಿದ್ದ ಸಂದರ್ಭದಲ್ಲಿ ಅಲ್ಲಿ ಅಲ್ಲಾಳನಾಥನ ಭೃತ್ಯರಾಗಿ ಶಂಕ–ಚಕ್ರಗಳ ಮುದ್ರೆಗಳನ್ನು ತಮ್ಮ ಭುಜಗಳಿಗೆ ಹಾಕಿಸಿಕೊಂಡರು. ಅವರು ಅಲ್ಲಿಂದ ಹಿಂತಿರುಗಿದ ಮೇಲೆ ಸ್ವದತ್ತ ಗ್ರಾಮವಾದ ಅಗ್ರಹಾರ ನವಿಲೆಯ ಅಲ್ಲಾಳನಾಥನಿಗೆ ದಾನಗಳನ್ನು ಬಿಟ್ಟು ಅಲ್ಲಿನ ಬ್ರಾಹ್ಮಣೋತ್ತಮರ ಆಶೀರ್ವಾದವನ್ನು ಪಡೆದು ಸುಖಿಗಳಾದರು ಎಂದು ಶಾಸನ ಸ್ಪಷ್ಟವಾಗಿ ತಿಳಿಸಿದೆ. ಇದು ಆ ಇಡೀ ಭೇರುಂಡವರ್ಗದ ಸೈನಿಕರೆಲ್ಲರೂ ಶ್ರೀ ವೈಷ್ಣವ ದೀಕ್ಷೆ ಪಡೆದು ವೈಷ್ಣವ ಒಕ್ಕಲಾದುದನ್ನು ಹೇಳುತ್ತಿದೆ.

ಇವರನ್ನು ಸ್ವಾಮಿಕಾರ್ಯಕ್ಕೆ ತಲೆಗೊಟ್ಟವರೆಂದು ಶಾಸನಗಳು ಹೊಗಳಿವೆ. ಇವರಲ್ಲಿ ಕೂಸ ಚಟ್ಟನೆಂಬುವವನನ್ನು ಸ್ವಾಮಿ ಸಂಪತ್ಪರಿಪೂರ್ಣನಾದ ಹನುಮಂತನಂತೆ ಹೊಯ್ಸಳ ನರಸಿಂಹನ ಅಣುಗ ಎಂದು ಹೊಗಳಿದೆ. ಗರುಡನಿಗೆ ಸರಿದೊರೆಯಾದ ಲೆಂಕರಂತೆ ಭೇರುಂಡದ ಕೂಸೂಗಳೂ ಸ್ವಾಮಿಕಾರ್ಯಕ್ಕೆ ಪ್ರಾಣವನ್ನು ಮುಡಿಪಾಗಿಟ್ಟವರು ಇವರನ್ನು ಸ್ವಾಮಿಕಾರ್ಯ ಧುರಂಧರರಾದ ವಿಷ್ಣುವಿನ ಭಕ್ತ, ಬಂಟ ಗರುಡನಿಗೂ ರಾಮನ ಭಕ್ತ, ಬಂಟ ಹನುಮಂತನಿಗೂ ಹೋಲಿಸಿ ವರ್ಣಿಸಿರುವುದು ಮತ್ತೆ ಮತ್ತೆ ಕಂಡು ಬರುತ್ತದೆ.

ಧರ್ಮ, ಶೌರ್ಯ, ಸತ್ಯ ತ್ಯಾಗಗಳು ಹಾಗೂ ಜಾಗರೂಕತೆ ಇವೆಲ್ಲಾ ಗುಣಗಳು ಒಂದಾಗಿ ಸ್ವಾಮಿನಿಷ್ಠೆಯೊ ಬೆರೆತ ಹನುಮಂತ, ಗರುಡ, ಭೇರುಂಡರು ವೀರರಿಗೆ ಮಾದರಿ ಆದರ್ಶರಾಗಿದ್ದರು. ವೈಷ್ಣವ ಧರ್ಮ ಈ ಗರುಡ ಹನುಮಂತರ ನಿಷ್ಠೆ ಸೇವೆಗಳನ್ನು ಮತ್ತಷ್ಟು ಮುಂಚೂಣಿಗೆ ತಂದಿತು.

**ವೀರಜಟ್ಟಿಕುಲ ಮತ್ತು ಶ್ರೀವೈಷ್ಣವ ಧರ್ಮ**

ಗುಜರಾತಿನ ಖಾತೆವಾಡದ ಮೂಲದ ನಿಂಬಜಾದೇವಿಯ ಆರಾಧಕರಾಗಿದ್ದ ಜಟ್ಟಿಕುಲದವರನ್ನು ಹೊಯ್ಸಳ ವಿಷ್ಣುವರ್ಧನ ಕರೆತಂದು ಅವರಿಗೆ ತನ್ನ ನಿಷ್ಠಾವಂತ ಸೇವಕರಾಗಿ ನೇಮಿಸಿಕೊಂಡಿದ್ದನೆಂಬುದನ್ನು ಈಗಾಗಲೇ ಚರ್ಚಿಸಲಾಗಿದೆ. ಕ್ರಿ.ಶ. ೧೧೩೯ರ ಉಂಡಿಗನಾಳಿನ ಶಾಸನವೊಂದು[೨೦] ವಿಷ್ಣುವರ್ಧನನ ಕಾರುಣ್ಯದಿಂದ ಹಾಗೂ ದ್ವಿಜರು ಗುರುಗಳ ಆಶೀರ್ವಾದದಿಂದ ಸ್ವಾಮಿ ಪ್ರಸಾದ ಸಂಪನ್ನರಾಗಿದ್ದರೆಂದು ಹೇಳುತ್ತದೆ. ಶ್ರೀವೈಷ್ಣವದೀಕ್ಷೆಯನ್ನು ಪಡೆದ ಈ ಜಟ್ಟಿಕುಲದವರು ತಮ್ಮ ಅನುವಂಶಿಕ ದೇವತೆ ನಿಂಬಜಾದೇವಿಯನ್ನು (ಬೇವಿನಮರ) ಆರಾಧಿಸುವುದರ ಜೊತೆಗೆ ನವನೂಲು ಜಟ್ಟಪ್ಪನೆಂಬ ತಮ್ಮ ಸಾಂಸ್ಕೃತಿಕ ನಾಯಕನನ್ನು, ಆಂಜನೇಯನನ್ನೂ ಆರಾಧಿಸುತ್ತಾರೆ. ದೊಡ್ಡದಾಗಿ ಪುಂಡ್ರವನ್ನು ಧರಿಸುತ್ತಾರೆ. ತಮ್ಮ ಗರಡಿಯ ಮನೆಗಳಲ್ಲಿ ಶ್ರೀವೈಷ್ಣವ ಲಾಂಚನಗಳನ್ನು ತಮ್ಮ ಗರಡಿಮಟ್ಟಿಯಲ್ಲಿಟ್ಟು ಪೂಜಿಸುತ್ತಾರೆ. ಈ ಪೂಜೆಯನ್ನು ವೈಷ್ಣವಶಕ್ತಿಯ ಹಾಗೂ ನಿಂಬಜೆಯ ಪೂಜೆ ಎನ್ನುತ್ತಾರೆ. ಈ ವೈಷ್ಣವ ಶಕ್ತಿಯೇ ಪ್ರಾಚೀನ ಜೆಟ್ಟಿಕುಲದವರಲೆಲ್ಲಾ ಪ್ರಸಿದ್ಧನಾದ ಅವರ ನಾಯಕ 'ನವನೂಲು ಕೊಂಡಾಜಟ್ಟಿ'. ಈ ನವನೂಲು ಕೊಂಡಾಜಟ್ಟಪ್ಪನ ಪ್ರತಿಮೆ ಮೂಲತಃ ರಾಮಾನುಜರ ಪ್ರತಿಮೆಯೆಂಬುದನ್ನು ನಾವು ಹಿಂದಿನ ಲೇಖನದಲ್ಲಿ ಗಮನಿಸಿದ್ದೇವೆ. ಶ್ರೀವೈಷ್ಣವ ದೀಕ್ಷೆಪಡೆದು ಒಕ್ಕಲಾಗಿ ಜನಿವಾರವನ್ನು ಪಡೆದುಕೊಂಡ ಆ ಘಟನೆ ಆ ಸಮುದಾಯಕ್ಕೆ ಬಹಳ ಪ್ರಮುಖವಾದ ವಿಷಯವಾದ್ದರಿಂದಲೇ ಅನೇಕ ಶತಮಾನಗಳ ನಂತರವೂ ಅದನ್ನು ಸ್ಮೃತಿಯಲ್ಲಿ, ಆಚರಣೆಯಲ್ಲಿ ಅವರು ಉಳಿಸಿಕೊಂಡು ಬಂದಿದ್ದಾರೆ. ಈ ಜನಾಂಗದ ಸ್ಮೃತಿಯಲ್ಲಿ ಜಟ್ಟಪ್ಪ ಮತ್ತು ರಾಮಾನುಜರು ಎಂದೋ ಏಕೀಭವಿಸಿದ್ದಾರೆ. ಕಾಲಾಂತರದಲ್ಲಿ ರಾಮಾನುಜರು ಮರೆತುಹೋಗಿ ವೈಷ್ಣವಲಾಂಚನಗಳು, ಆಚರಣೆಗಳು ಮಾತ್ರ ಉಳಿದು ರಾಮಾನುಜರ ಪ್ರತಿಮೆಯು ಜಟ್ಟಪ್ಪ ದೈವವಾಗಿದೆ. ಇವೆಲ್ಲವೂ ಹುಟ್ಟಾ ಹೋರಾಟಗಾರರಾದ ಜಟ್ಟಿಗಳನ್ನು ವೈಷ್ಣವ ಧರ್ಮ ತನ್ನ ಒಕ್ಕಲಾಗಿಸಿಕೊಂಡುದರ ಕಥನವೇ ಆಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಜಟ್ಟಿಗಳು ತಾವು ನಿರ್ಮಿಸಿದ್ದ ನಿಂಬಜಾ, ನಿಂಬೇಶ್ವರ ದ್ವಿಕೂಟ ದೇವಾಲಯವನ್ನೇ ತ್ರಿಕೂಟವಾಗಿ ಮಾಡಿ ಅಲ್ಲಿ ಕೇಶವನನ್ನು ಸ್ಥಾಪಿಸಿ ದಾನಗಳನ್ನು ಬಿಟ್ಟಿದ್ದಾರೆ. ಇಂದಿಗೂ ಜಟ್ಟಿಗಳು ಜನಿವಾರವನ್ನು ಮಹಾಪವಿತ್ರವೆಂದು ತೊಡುವುದು ಹಾಗೂ ತಮ್ಮನ್ನು ಪರಮ ವೈಷ್ಣವರೆಂದು ಕರೆದುಕೊಳ್ಳುವುದು, ಆತ್ರೇಯ, ಭಾರದ್ವಾಜ, ಶಾಂಡಿಲ್ಯ ಮುಂತಾದ ದಶಗೊತ್ರಗಳನ್ನು ಹೇಳುವುದು ಹಾಗೂ ಸಂಧ್ಯಾವಂದನೆ ಮಾಡುವುದು ಇತ್ಯಾದಿಗಳು ಈ ಒಕ್ಕಲಾದುದರ ಪರಿಣಾಮಗಳೇ. ಈಗಲೂ ಕರ್ನಾಟಕದಾದ್ಯಂತ ಜಟ್ಟಿ ಸಮುದಾಯದ ಕೆಲವು ಕುಟುಂಬಗಳು ಕಟ್ಟಾ ಶ್ರೀವೈಷ್ಣವ ಆಚರಣೆಗಳನ್ನು ಅನುಸರಿಸುತ್ತಿರುವುದನ್ನು ಗಮನಿಸಬಹುದು.

ರಾಮಾನುಜರ ಆಗಮನದೊಂದಿಗೆ ಕನ್ನಡನಾಡಿಗೆ ತಮಿಳುನಾಡಿನ ಬೇರೆ ಬೇರೆ ಗುಂಪಿನ ಬ್ರಾಹ್ಮಣ ಕುಟುಂಬಗಳು ಬಂದವು. ಭಟ್ಟರು, ಹೆಬ್ಬಾರರು, ಹೆಮ್ಮಿಗೆಯರು, ಕಡಂಬಿಯರು, ಕಂದಾಡೈಯರು, ನಲ್ಲಾನ್ ಚಕ್ರವರ್ತಿಗಳು, ತಾತಾಚಾರ್ಯರು ಹಾಗೂ ಇತರೆ ಧರ್ಮನಿಷ್ಠ ಮತ್ತು ವಿದ್ವಾಂಸ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ಕುಟುಂಬಗಳು ವಲಸೆ ಬಂದು ಈ ನಾಡಿನಲ್ಲಿ ನೆಲೆನಿಂತವು.[೨೧] ವಲಸೆಬಂದ ವೈಷ್ಣವರಿಗೂ, ವೈಷ್ಣವ ದೀಕ್ಷೆ (ಪಂಚ ಸಂಸ್ಕಾರಗಳು ತಪ, ಪುಂಡ್ರ, ನಾಮ, ಮಂತ್ರ, ಯಜ್ಞ) ಪಡೆದು ಮತಾಂತರಗೊಂಡವರಿಗೂ ನೆಲೆಯನ್ನು ಕಲ್ಪಿಸುವ ಜವಾಬ್ದಾರಿ ಇಲ್ಲಿನ ಸಮಾಜದ ಮೇಲೆ ಬಿತ್ತು. ಅಗ್ರಹಾರ, ಕೇಶವಪುರಗಳ ನಿರ್ಮಾಣ ಇಂಥವರಿಗೆ ಸಾಮಾಜಿಕ ಆರ್ಥಿಕ ಭದ್ರತೆಯನ್ನು ಒದಗಿಸಿಕೊಡುವ ಏರ್ಪಾಟುಗಳೇ ಎನ್ನಬಹುದು. ಅಲ್ಲೆಲ್ಲ ಅವರ ಧಾರ್ಮಿಕ ಆಚರಣೆಗಳಿಗಾಗಿ ಮಂದಿರಗಳನ್ನು ಮಠಗಳನ್ನು ನಿರ್ಮಿಸಿಕೊಡಲಾಯಿತು. ಪೂಜಾದಿಗಳಿಗಾಗಿ, ಪರಿವಾರ ವರ್ಗಕ್ಕಾಗಿ ಯಥೇಚ್ಛವಾಗಿ ಭೂಮಿ, ಹೊನ್ನುಗಳ ದಾನ ನೀಡಲಾಯಿತು. ಸುಸಜ್ಜಿತವಾದ ಮನೆಗಳನ್ನು ಪಾತ್ರೆ ಪಡಿಗಗಳೊಂದಿಗೆ ಮಹಾಜನರ ಜೀವಿತಕ್ಕೆ ವೃತಿ ಭೂಮಿಗಳೊಂದಿಗೆ ವ್ಯವಸ್ಥಿತ ನೆಲೆಯನ್ನು ಕಲ್ಪಿಸಿಕೊಡಲಾಯಿತು.[೨೨] ಅಂತಹ ವಲಸಿಗರೊಂದಿಗೆ ಸ್ಥಳೀಯ ವೈಷ್ಣವ ಒಕ್ಕಲಾದ ಸ್ಥಳೀಯ ಜನಸಮುದಾಯದ ಒಡನಾಟ ಆಚರಣೆಗಳು, ಒಡಂಬಡಿಕೆ–ಸಂಘರ್ಷಗಳನ್ನು ನಾವಿನ್ನೂ ಸರಿಯಾಗಿ ಅಧ್ಯಯನ ಮಾಡಿಲ್ಲ.

ಇದುವರೆವಿಗೂ ರಾಮಾನುಜರನ್ನು ಕುರಿತು ಬಂದಿರುವ ಬರವಣಿಗೆಗಳು ಅವರನ್ನು ಧರ್ಮ ಪ್ರವರ್ತಕರಾಗಿ ದಾರ್ಶನಿಕರಾಗಿ ಪ್ರಾಜ್ಞ ಭಾಷ್ಯಕಾರರಾಗಿ ಗುರು ಆಚಾರ್ಯರಾಗಿ ಹೆಚ್ಚು ಚಿತ್ರಿಸಿಕೊಟ್ಟಿವೆ. ಬಹುಷಃ ಅವರ ಪ್ರಭಾವಕ್ಕೆ ಒಳಗಾಗಿ ಒಕ್ಕಲಾದ ನಾನಾ ತಳ ಸಮುದಾಯಗಳು ತಮ್ಮ ಮೌಖಿಕ ಕಥೆ ಪುರಾಣಗಳಲ್ಲಿ, ಸ್ಮೃತಿಕೋಶದಲ್ಲಿ, ನಂಬಿಕೆ, ಆಚರಣೆ ಅನುಷ್ಠಾನಗಳಲ್ಲಿ ಅವರನ್ನು ತಮ್ಮವನಾಗಿ ಸ್ವೀಕರಿಸಿರುವ ಪರಿಯ ಅಧ್ಯಯನ ಬಹಳ ಕುತೂಹಲಕಾರಿಯಾಗಿದ್ದು ವಿಶಿಷ್ಟವಾದ ಚಿತ್ರವನ್ನೇ ಕಟ್ಟಿಕೊಡಬಲ್ಲುದೆನಿಸುತ್ತದೆ.

**ಬಂಟ ಸಾಸಿರ್ವರ ಮೇಲೆ ಶೈವ ಧರ್ಮದ ಪ್ರಭಾವ**

ಬಂಟಸಾಸಿರ್ವರೆಂಬ ಕರ್ನಾಟಕದ ಮತ್ತೊಂದು ವೀರಜನಾಂಗವು ಶೈವ ಆರಾದಕರಾಗಿದ್ದರು. ಮಹಾಮಂಡಳೇಶ್ವರ ಮಹಾ ಪ್ರಚಂಡ ದಣ್ಡನಾಯಕ ಏಚಿಮಯ್ಯನ ಮಗ ಮಹಾಸನ್ಧಿವಿಗ್ರಹಿ ದಣ್ಡನಾಯಕ ಪೋಚಿಮಯ್ಯನ ಆರು ಜನ ವೀರ ಭಟರನ್ನು ಷಟ್‌ಪುರುಷರೆಂದು ಕರೆದು ಅವರು ಶಿವಾಲಯವನ್ನೆತ್ತಿಸಿದ್ದನ್ನು ಒಂದು ಶಾಸನ ಹೇಳಿದೆ.[೨೩] ಇದು ಬಂಟೇಶ್ವರ ದೇವಾಲಯವೆಂದು ಪ್ರಸಿದ್ಧವಾಗಿ ಮುಂದೆ ಕೋಳಿಗುಂದದ ಒಡೆಯರಿಂದ ನಾಳ್ಪ್ರಭುಗಳಿಂದ ದಾನ ಪಡೆದಿದೆ. ಈ ಬಂಟರ ಸಂಘಟನೆಯನ್ನು 'ಬಂಟಸಾಸಿರ್ವರ್' ಎಂಬ ಹೆಸರಿನಿಂದ ಗುರುತಿಸಲಾಗಿದೆ. ಇವರು ಚಕ್ರವರ್ತಿಗಳು, ಮಂಡಳೇಶ್ವರರು ಸಾಮಂತರು ಮೊದಲಾದವರಲ್ಲಿ ನೆಚ್ಚಿನ ಬಂಟರಾಗಿ ಯುದ್ಧಗಳಲ್ಲಿ, ಆಕ್ರಮಣಗಳಲ್ಲಿ ತಮ್ಮ ಒಡೆಯರನ್ನು ಗ್ರಾಮಗಳನ್ನು ರಕ್ಷಿಸುವ ಹೊಣೆ ಹೊತ್ತವರು.

**ಹುಲಿಯ ಜಂಗುಳಿಯ ಮೊತ್ತದ ವೀರಪಡೆಯಮೇಲೆ – ಶೈವಧರ್ಮದ ಪ್ರಭಾವ**

ಕರ್ನಾಟಕದ ಚರಿತ್ರೆಯಲ್ಲಿ ಒಂದು ಕಡೆ ವೀರರ ಸಮೂಹಗಳು ವೈಷ್ಣವಧರ್ಮದ ಒಕ್ಕಲಾಗುವುದು ಕಂಡುಬರುವಂತೆಯೇ ಮತ್ತೊಂದೆಡೆ ವೀರಸಮೂಹಗಳು ಶಿವ/ವೀರಭದ್ರನ ಒಕ್ಕಲಾಗುತ್ತಿದ್ದುದನ್ನು ೧೨–೧೩ನೇಶತಮಾನದಲ್ಲಿ ವಿಶೇಷವಾಗಿ ಗಮನಿಸಬಹುದು. ೧೩ನೇ ಶತಮಾನದ ಹೊತ್ತಿಗಾಗಲೇ ವೀರ

ಶೈವರಲ್ಲಿ ವೀರ ಮಾಹೇಶ್ವರರು ತಮ್ಮ ಧರ್ಮ– ದೈವಗಳ ಸಂರಕ್ಷಣೆಗಾಗಿ ಕಂಕಣಬದ್ಧರಾಗಿದ್ದುದು ನಮಗೆ ತಿಳಿದಿದೆ.

ಹುಲಿಯ ಜಂಗುಳಿಯ ಮೊತ್ತದ ವೀರರು ಮತ್ತು ಜಂಗುಳಿ ವೀರ ಮಾಹೇಶ್ವರರರೆಂಬ ಎರಡು ಹೆಸರುಗಳು ಈ ಕಲದಲ್ಲಿ ಕಂಡುಬರುತ್ತದೆ. ಈ ಎರಡಕ್ಕೂ ಸಂಬಂಧವಿರಬಹುದೇ ಎಂಬ ಚರ್ಚೆಗೆ ಇಲ್ಲಿ ಅವಕಾಶವಿದೆ. ಜಂಗುಳಿ ವೀರರು ಕೆಲವರು ವೀರಮಾಹೇಶ್ವರರೂ ಆಗಿ ಪರಿವರ್ತನೆಗೊಂಡಿದ್ದರು. ಅವರ ಮೇಲೆ ವೀರಶೈವ ಧರ್ಮವು ವಿಶೇಷವಾಗಿ ಪ್ರಭಾವಿಸಿತ್ತು. . "ಶ್ರೀ ಮನ್ಮಹಾಸಾಮನ್ತ ಹುಲಿಯಜಂಗುಳಿ ಪ್ರಮುಖ ಮುಖ್ಯವಾದ ಸಾಮನ್ತ ಬರ್ಮಯ್ಯನ ಮಡದಿ ಶಿವಭಕ್ತಳಾದ ಬಮ್ಮವ್ವೆನಾಯಕಿತಿಯು ಬ್ರಹ್ಮೇಶ್ವರದೇವಾಲಯವನ್ನು ಕಟ್ಟಿಸಿ ದೇವರ ಪ್ರತಿಷ್ಠೆಯನ್ನು ಮಾಡಿಸಿರುವುದು ಕಂಡುಬಂದಿದೆ.[೨೪] ಮರಡಿಪುರದ ಶಾಸನದ ಹುಲಿಯ ಜ್ಯಂಗುಡಿಮೊತ್ತದ ಸೇನಾನಾಯಕಂ ಶ್ರೀ ಕಲಿದೇವರ ದಿವ್ಯ ಶ್ರೀಪಾದಪದ್ಮಂಗಳಂ ಕಮಳ ನಾಳ ಸೂತ್ರದಂತೆ ಎಡೆವರಿಯದೆ ಅನುದಿನಂ ಬೆಸಕೆಯ್ಯುತಿದ್ದ ನಾಗಯ್ಯ, ವೀರಬಮ್ಮಯ್ಯನ ಮಗ, ಭಕ್ತರ ಕಾರುಣ್ಯದ ಮಗ, ಶರಣರದಾಸ, ಸೋವನ ಸಿಂಗನ ಮಾರೆಯನಾಯಕ ಮುಂತಾದ ಅನೇಕ ಗಾವುಂಡುಗಳು ಸೇರಿ 'ಯೆಮ್ಮೆಯ ಕೇತನಹಟ್ಟಿ'ಯನ್ನು ಶಿವಪುರವಾಗಿ ಮಾಡಿ ಶಿವಭಕ್ತರಿಗೆ ಕೊಟ್ಟಿದ್ದಾರೆ.[೨೫] ಗುಮ್ಮಳಾಪುರದ ದಾನಶಾಸನ [೨೬] 'ಜಂಗುಳಿವೀರಪ್ಪ'ನೆಂದ ಕರೆದಿರುವ ಜಂಗುಳಿ ದೇವನೆಂಬ ಶರಣನನ್ನು ಚನ್ನಬಸವಪುರಾಣದಲ್ಲಿ[೨೭] ಏಳುನೂರೊಂದು ವಿರಕ್ತರ ತರುವಾಯದ ಶರಣರಲ್ಲಿ ಗುರುತಿಸಿ ವೀರಮಾಹೇಶ್ವರನೆಂದು ಕರೆದಿದೆ. ಈತನು ಸುಪ್ರಸಾದಿದೇವ ಮುಖ್ಯರಾದ ಚಾರುಚರಮೂರ್ತಿಗಳು ಸೇರಿ ಬಂದ ಜಂಗಮರಿಗೆ ದಾಸೋಹವನ್ನು ಮಾಡುತ್ತಿದ್ದರೆಂದು ಹೇಳುವುದರಿಂದ ಇವರೆಲ್ಲರೂ ಸ್ಪಷ್ಟವಾಗಿ ಜಂಗುಳಿ ಮೊತ್ತದ ವೀರರೂ ಹಾಗೂ ವೀರ ಮಾಹೇಶ್ವರತ್ವವನ್ನು ಅನುಸರಿಸುತ್ತಿದ್ದ ವೀರ ಶೈವ ಭಕ್ತರೆಂಬುದು ಸಾಬೀತಾಗುತ್ತದೆ.

ತ್ರಿವಿದ ವೀರಮಾಹೇಶ್ವರರಲ್ಲಿ 'ಇಹಲೋಕ ವೀರಮಾಹೇಶ್ವರ'ರಿಗೆ ಜಂಗುಳಿವೀರರ ಲಕ್ಷಣಗಳು ಹೊಂದಿಕೆಯಾಗುತ್ತವೆ. ವೀರರೂ ಕಿರುಗೆಜ್ಜೆಯ ಗಂಡ ಪೆಂಡೇರವನ್ನು ಕಾಲಿಗೆ ಕಟ್ಟಿಕೊಳ್ಳುತ್ತಿದ್ದರು. ವೀರಮಾಹೇಶ್ವರರೂ ಕೆಲವರು ಕಣಕಾಲಿಗೆ ಗೆಜ್ಜೆ ಗಂಟೆಯನ್ನು ಕಟ್ಟಿಕೊಂಡು ಶರಣರ ಹಿಂದೆ ಸುತ್ತುತ್ತಿದ್ದರೆಂದು ತಿಳಿದುಬರುತ್ತದೆ. ಜಂಗುಳಿ ವೀರರ ರಾಜನಿಷ್ಠೆಯು ಇಲ್ಲಿ 'ಸಮಯನಿಷ್ಠೆ' (ಧರ್ಮನಿಷ್ಠೆ)ಯಾಗಿ ಪಲ್ಲಟಗೊಂಡಿದೆ ಅಷ್ಟೆ. ಜಂಗುಳಿ ಎಂಬ ಪದ ಶರಣರ ಹೆಸರಿನೊಂದಿಗೆ ಅಂಟಿಕೊಂಡು ೧೪ನೇ ಶತಮಾನದವರೆಗೆ ಕಂಡುಬಂದಿದೆ. ಅಲ್ಲದೆ, ಹುಲಿಯಜ್ಯಂಗುಡಿ ಸೇನಾನಾಯಕ ನಾಗಯ್ಯನಿಂದ 'ಯೆಮ್ಮೆಯ ಕೇತನಹಟ್ಟಿ'ಯನ್ನು ಶಿವಪುರವಾಗಿ ಪಡೆದ ಅಲ್ಲಿನ ದೇವಾಲಯಗಳ ಭಕ್ತರನ್ನು ದೇವರುಗಳ ತೊತ್ತುಗಳೆಂದು, ಲೆಂಕರೆಂದು ಕರೆದಿರುವುದನ್ನು ಗಮನಿಸಿದರೆ, ಆ ಹತ್ತೂ ಜನ ಲೆಂಕರೂ ಅನುಕ್ರಮವಾಗಿ ಅಯಾಯ ದೇವಾಲಯಗಳ ರಕ್ಷಣೆಗೆ ಮೀಸಲಾದ ವೀರಮಾಹೇಶ್ವರರೆಂದು ಭಾವಿಸಲು ಅವಕಾಶವಿದೆ.

ವೀರ ಗಾಸೆಯವರು ಮತ್ತು ವೀರಮಾಹೇಶ್ವರರಿಗೆ ಖಂಡಿತ ಸಂಬಂಧವಿದೆ. ವೀರಗಾಸೆಯವರು ವೀರಮಾಹೇಶ್ವರರ ಪಳೆಯುಳಿಕೆಗಳೆಂದು ನನಗೆ ಅನ್ನಿಸುತ್ತದೆ. ಶಿವಪುರಗಳೆಂದು ಕರೆಯುವ ಕರ್ನಾಟಕದ ಊರುಗಳಲ್ಲಿ ವೀರಭದ್ರನ ಒಕ್ಕಲಲ್ಲಿ ವೀರಗಾಸೆ ಕಲೆಯಾಗಿ, ದೈವಾರಾಧನೆಯ ಭಾಗವಾಗಿದ್ದು, ಈ ಕುಣಿತದ ಅಭ್ಯಾಸ ಇವತ್ತಿಗೂಯಿದೆ. ಜಂಗುಳಿ ವೀರರು ಶಿವರಾತ್ರೆಯದಿನ ದಾನಕೊಟ್ಟಿದ್ದಾರೆ, ಶಿವಪುರ ನಿರ್ಮಾಣಮಾಡಿದ್ದಾರೆ ಎಂಬುದರಿಂದ ಅವರಿಗಿದ್ದ ವಿಶೇಷಣ ವಾದ 'ಕಳ್ಪ ಮುದ್ರೆ' ಎಂದರೆ 'ಲಿಂಗ ಮುದ್ರೆ' ಇರಬಹುದಾ ಎಂಬ ಪ್ರಶ್ನೆ ಏಳುವುದು ಸಹಜ ಆದರೆ 'ಕಳ್ಪ' ಎಂಬುದಕ್ಕೆ 'ಲಿಂಗ' ಎಂಬ ಅರ್ಥವಾಗಲಿ ಅಥವಾ 'ಕಳ್ಪುಮುದ್ರೆ' ಅಂತ ಇಟ್ಟುಕೊಂಡರೂ್ರ ಅದಕ್ಕೆ 'ಲಿಂಗಮುದ್ರೆ' ಅನ್ನುವ ಅರ್ಥದ ಉಲ್ಲೇಖ ಇದುವರೆಗೂ ಎಲ್ಲಿಯೂ ನನಗೆ ಕಂಡುಬಂದಿಲ್ಲ. ಕಲ್ಕೆರೆ, ಮರಡಿಪುರ, ಗುಮ್ಮಳಾಪುರದ ಮೂರು ಶಾಸನಗಳಲ್ಲೂ ಯಾವುದೇ ಕಾಳಗದ ವಿವರಗಳಿಲ್ಲ, ಬದಲಿಗೆ ಶಿವ ದೇವಾಲಯಗಳಿಗೆ ನೀಡಿದ ದಾನದ, ದಾಸೋಹದ ವಿವರಗಳಿವೆ. ಇಲ್ಲಿನ ವೀರರು ಶಿವಭಕ್ತರಾಗಿ ಶರಣರ ದಾಸರಾಗಿ ಗುರುತಿಸಲ್ಪಟ್ಟಿದ್ದಾರೆ, ಸ್ವಯಂಭುದೇವರಿಗೆ ಹಾಗೂ ಮೂರುಜಾವಿದೇವರಿಗೆ ಶಿವರಾತ್ರೆಯಂದು ಭೂಮಿದಾನಮಾಡಿರುವ ವಿಚಾರವನ್ನು ಶಾಸನ ದಾಖಲಿಸಿದೆ. ಮರಡಿಪುರ ಶಾಸನದಲ್ಲಿ ಸಂಗನಬಸವಯ್ಯ, ಜಗದೇವದಂಣ್ನಾಯಕ ಏಕಾನ್ತದರಾಮಯ್ಯರ ಹೆಸರಿರುವುದನ್ನು ಗಮನಿಸಬಹುದು. ಶಾಸನದಲ್ಲಿ ವೀರಶೈವ ವಾತಾವರಣವಿದೆ. ಅನೇಕ ವೀರಶೈವ ಭಕ್ತರ ಉಲ್ಲೇಖಗಳಿವೆ. ಇಲ್ಲಿನ ಜಂಗುಳಿ ವೀರರು ವೀರಶೈವರೆಂಬುದರಲ್ಲಿ ಯಾವ ಅನುಮಾನವೂಯಿಲ್ಲ. ಅದರೂ 'ಕಳ್ಪಮುದ್ರೆ' ಎಂಬುದನ್ನು 'ಲಿಂಗಮುದ್ರೆ' ಎಂದು ಹೇಳಲು ಆಧಾರ ಸಾಲದು.

'ಮಾಹೇಶ್ವರನು' ಷಟ್ಸ್ಥಲಗಳಲ್ಲಿ ಎರಡನೆಯ ಹಂತವಾದ ಮಾಹೇಶ್ವರಸ್ಥಲದಲ್ಲಿರುವವನು. ಈ ಸ್ಥಲ ಲಿಂಗ ನಿಷ್ಠೆ ವೃದ್ಧಿಸುವ ಸ್ಥಲ. ಅವನು ಪರಸ್ತ್ರೀ ಪರಧನ ವ್ಯಾಮೋಹವನ್ನು ಬಿಡಬೇಕಾದವನು, ವಿರಾಗಿಯೂ, ಲಿಂಗನಿಷ್ಠಾಪರನೂ ಆಗಿರುವ ಭಕ್ತ. ಇಂಥ ವೀರಮಾಹೇಶ್ವರರಲ್ಲಿ ಇಹಲೋಕ ವೀರ, ಪರಲೋಕವೀರ ಮತ್ತು ಲಿಂಗವೀರ ಎಂಬ ಮೂರು ಬಗೆಯನ್ನು ಗುರುತಿಸಲಾಗಿದೆ. ಅದನ್ನು 'ಮಾಹೇಶ್ವರ ತ್ರಿವಿಧ'ವೆಂದು ಕರೆಯಲಾಗುತ್ತದೆ. ತಾನು ಕೈಕೊಂಡ ಕಾರ್ಯವನ್ನು ಸಾಧಿಸುವುದರ ಜೊತೆಗೆ ತನ್ನ ಕಾರ್ಯಕ್ಕೆ ಅಡ್ಡಿ ಬರುವವರನ್ನು ನಿಗ್ರಹಿಸುವವನು ಇಹಲೋಕವೀರ, ಚತುರ್ವಿಧ ಪುರುಷಾರ್ಥಗಳನ್ನು ಲಕ್ಷಿಸದೆ ನಿಷ್ಕಾಮದಿಂದಿರುವವನು ಪರಲೋಕವೀರ ಮತ್ತು ಲಿಂಗಾಂಗಸಂಗಿಯಾಗಿ ತನ್ನ ಕರಣಗಳೆಲ್ಲವನ್ನೂ ಅಂಕೆಯಲ್ಲಿಟ್ಟುಕೊಳ್ಳುವ ಲಿಂಗವೀರ ಎಂಬ ಮೂರು ಪ್ರಕಾರದ ಮಾಹೇಶ್ವರರ ಲಕ್ಷಣಗಳನ್ನು ವಿವರಿಸಲಾಗಿದೆ.[೨೮] "ಮರ್ತ್ಯಲೋಕದ ಮಹಾಗಣಂಗಳು ಮೆಚ್ಚುವಂತೆ ಷಡ್ದರ್ಶನಂಗಳ ನಿರಸನವ ಮಾಡಿ ತನ್ನ ಸಮಯಕ್ಕೆ ಪ್ರಾಣವ ವೆಚ್ಚಿಸುವನಾಗಿ ಇಹಲೋಕವೀರ"[೨೯] ಎಂದು ಚೆನ್ನಬಸವಣ್ಣ ಹೇಳಿದ್ದಾನೆ. ಇಂತಹ ಸಮಯ ನಿಷ್ಠೆಯನ್ನು ತೋರಿಸಿರುವ ಒಬ್ಬವೀರನ ಉದಾಹರಣೆ ಶಾಸನವೊಂದರಲ್ಲಿದೆ. ಶಿವಪುರವಾಗಿ ಪರಿವರ್ತಿಸಿ ನೀಡಲಾಗಿದ್ದ ಬಿದಿರಕೋಟೆ ಗ್ರಾಮವನ್ನು ಭಕ್ತರಿಗೆ ಬಿಡದೆ ಮಾದೆಯ್ಯನಾಯಕನೆಂಬುವವನು ದಾಷ್ಟ್ಯವನ್ನು ತೋರಿದಾಗ ಆಗ್ರಾಮದ ವೀರಮಲ್ಲಯ್ಯನೆಂಬ ಶಿವಭಕ್ತನು ತನ್ನನ್ನು ತಾನೇ ಕುತ್ತಿಕೊಂಡು ಆ ಗ್ರಾಮದ ನಾಲ್ಕುದಿಕ್ಕಿನ ಸೀಮೆಕಲ್ಲುಗಳ ಮೇಲೆ ತನ್ನ ರಕ್ತಸುರಿಸಿ ಗುರುತುಮಾಡುವ ವಿಭಿನ್ನ 'ಸಮಯನಿಷ್ಠೆ'ಯನ್ನು ತೋರಿಸಿ ಅಧಿಕಾರಿಯನ್ನು ಮಣಿಸಿ ತಮ್ಮ ಗ್ರಾಮವನ್ನು ಶಿವಪುರವಾಗಿ ಮತ್ತೆ ಪಡೆದು ವೀರಮಾಹೇಶ್ವರತನವನ್ನು ಪ್ರದರ್ಶಿಸಿದ್ದಾನೆ.[೩೦]

ಶೈವ ಶಾಸನಗಳು ಹಾಗೂ ವಚನಗಳಲ್ಲಿ ಕಂಡುಬಂದಿರುವ ಜಂಗುಳಿವೀರರಿಗೆ ಈ 'ಲೌಕಿಕ ಮಹೇಶ್ವರರ' ಅಥವಾ 'ಇಹಲೋಕವೀರಮಾಹೇಶ್ವರ'ನ ಲಕ್ಷಣಗಳು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಶರಣರ ಹಿಂದೆ ಇಂಥ ಜಂಗುಳಿಯ

ವೀರರಿರುತ್ತಿದ್ದುದನ್ನು ವಚನಗಳ ಉಲ್ಲೇಖಗಳಿಂದ ತಿಳಿಯಬಹುದು. "ಜಾನುಜಂಗೆ (ಮೊಳಕಾಲಿನ ಗೆಜ್ಜೆ) ಯಲಿ ಹುಟ್ಟಿ ಜಂಗಮವೆನಿಸಿಕೊಳಬುದೆ" [೩೧], "ಜಂಗಮದ ಸರ್ವಸಂಗವ ಮಾಡುವ ಜಂಗು ಜಂಘೇಯ ಮುಚಿದು"[೩೨] ಎಂಬ ವಚನಕಾರ ದಾಸೋಹದ ಸಂಗಣ್ಣನ ಮಾತು, "ಪರವಿತ್ತ ಪರಸತಿಗೆಳಸನ್ ಅರಸೇವೆ ಹಂಗುಹಜಿ್ಯಳಿದ ನಿರ್ವಂಚಕನೆ ಮಾಹೇಶ್ವರ[೩೩] ಎಂಬ ಮಾತುಗಳು, 'ಜಂಗು (ಗೆಜ್ಜೆ) ಕಟ್ಟಿದ ಜಂಘೆಯನ್ನು ಮುರಿದು' ಜಂಗಮ ಸಂಗವನ್ನು ಮಾಡುವವನು ಹಾಗೂ ಸಂಪತ್ತು, ವೀರಸ್ವರ್ಗದ ರಮಣಿಯರ ಹಂಬಲ, ಅರವೆಸನದ (ಜೋಳವಾಳಿತನ)ದ ಹಂಗನ್ನು ಹರಿದುಕೊಂಡವನು ಮಾತ್ರ ಮಾಹೇಶ್ವರನಾಗಬಹುದು ಎಂಬುದನ್ನು ಹೇಳುತ್ತಿವೆ. ಅಲ್ಲದೆ ಇಂತಹ ವೀರರ 'ರಾಜನಿಷ್ಠೆ'ಯು 'ಲಿಂಗನಿಷ್ಠೆ'ಯಾಗಿ ಪರಿವರ್ತನೆಗೊಳ್ಳಬೇಕಾದುದನ್ನೇ ಒತ್ತಿಹೇಳುತ್ತಿರುವಂತಿದೆ. ಅರಸನಿಂದ ವೀಳೆಯವನ್ನು ಪಡೆದು ಭಾಷೆಸಲಿಸಿ ವೇಳೆಗೊಂಡು ಮೆಚ್ಚುಕೊಡುಗೆಗಳನ್ನು ಪಡೆಯುತ್ತಿದ್ದ ವೀರರು ಇಲ್ಲಿ 'ಸಮಯ' ನಿಷ್ಠರಾಗಿ ಮರ್ತ್ಯ ಲೋಕದ ಮಹಾಗಣಂಗಳು ಮೆಚ್ಚುವಂತೆ ನಡೆದುಕೊಳ್ಳಬೇಕಾಗುತ್ತದೆ. ಹಾಗೆ ಪರಿವರ್ತನೆಗೊಳ್ಳದ ಅರೆಬರೆ ಬದಲಾವಣೆಗೊಂಡವರು "ಜಂಗಮ ಜಂಗುಕಟ್ಟಿ ಹಿಂಗಡೆ ತಿರುಗಲು ಸಂಗನ ಶರಣರಿಗೇನುಫಲ"[೩೪] ಎಂದು ವಿಡಂಬನೆಗೆ ಒಳಗಾಗಿರುವುದೂ ಉಂಟು.

ವೀರರು ಘಂಟೆಯನ್ನು ಧರಿಸಿ ಮುಖ್ಯವ್ಯಕ್ತಿ ಅಥವಾ ಅರಸರ ಹಿಂದೆ ತಿರುಗುವ ಕರ್ತವ್ಯವನ್ನು ನೆರವೇರಿಸುತ್ತಿದ್ದು, ಶರಣರಾದಮೇಲೂ ಅದನ್ನು ಬಿಡದೆ ಶ್ರೇಷ್ಠ ವ್ಯಕ್ತಿಗಳ, ಶಿವಭಕ್ತರ ಹಿಂದೆ ಅವರ ಕಾಪಿನವರಾಗಿ ಸುಳಿದಾಡುತ್ತಿದ್ದಿರೆಂಬುದನ್ನು ಇಂತಹ ಸಾಹಿತ್ಯಿಕ ಉಲ್ಲೇಖಗಳು ತಿಳಿಸುತ್ತವೆ. ಅಂಥವರನ್ನು ಈ ಮಾತು ವಿಡಂಬಿಸುತ್ತಿದೆ. ಎಲ್ಲಿ ಶರಣತ್ವವಿದೆಯೋ ಅಲ್ಲಿ ರಾಗದ್ವೇಶಗಳಿಗೆ, ಆಕ್ರಮಣಶೀಲತೆಗೆ ಅವಕಾಶವಿಲ್ಲ ಎಲ್ಲಿ ಆಕ್ರಮಣದ ಭಯವಿಲ್ಲವೋ ಅಲ್ಲಿ ರಕ್ಷಣೆಯ ಅವಶ್ಯಕತೆಯೂ ಬರುವುದಿಲ್ಲ. ಹಾಗಾಗಿ ಈ ಜಂಗುಳಿ ವೀರರ ಅವಶ್ಯಕತೆ ಶರಣರಿಗೆ ಅನವಶ್ಯಕ, ಸಂಗನ ಶರಣರಿಗೆ ಇದು ಬೇಡವಾದದ್ದು ಮತ್ತು ವ್ಯರ್ಥವೆಂಬ ಭಾವ ಈ ಮಾತಿನಲ್ಲಿರುವುದನ್ನು ಗಮನಿಸಬಹುದು.

**ವಿಜಯನಗರದ ವೀರ ಪಡೆಗಳು ಮತ್ತು ಶ್ರೀವೈಷ್ಣವ ಧರ್ಮ ಹಾಗೂ ಮೈಸೂರು ಒಡೆಯರ ವೈಷ್ಣವ ಪ್ರೇಮ**

ಬುಕ್ಕರಾಯನ ಕಾಲಕ್ಕಾಗಲೇ ಶ್ರೀವೈಷ್ಣವರು ರಾಜಕೀಯವಾಗಿ ಸಾಂಸ್ಕೃತಿಕವಾಗಿ ಭದ್ರವಾಗಿ ನೆಲೆಯೂರಿದ್ದರು. ಅವರ ಕೈ ಮೇಲಾಗಿತ್ತು. ಅನೇಕ 'ಕೇಶವಪುರ'ಗಳ ನಿರ್ಮಾಣವಾಗಿತ್ತು. ಶ್ರೀವೈಷ್ಣವ ಭಕ್ತಿ, ದ್ವೈತ, ವಿಶಿಷ್ಠಾದ್ವೈತಗಳೆರಡೂ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕೃಷ್ಣದೇವರಾಯನ ಕಾಲದಲ್ಲಿ ವೈಷ್ಣವಾಲಯಗಳು ತಿರುವೆಂಗಳನಾಥ, ನರಸಿಂಹ, ಕೃಷ್ಣನ ದೇವಾಲಯಗಳು ನಿರ್ಮಾಣವಾದವು ಮತ್ತು ವಿಶೇಷವಾಗಿ ವೈಷ್ಣವ ದೇವಾಲಯಗಳು ಮಠಗಳು ಪ್ರೋತ್ಸಾಹ ಪಡೆಯುತ್ತಿದ್ದವು.

ರಾಜಧರ್ಮವಾಗಿ ವಿಜಯನಗರದ ಅರಸರು, ಮೈಸೂರಿನ ಒಡೆಯರು ಶ್ರೀವೈಷ್ಣವ ಧರ್ಮಕ್ಕೆ ನೀಡಿದ್ದ ಮಾನ್ಯತೆ ಅರಮನೆ ಗುರುಮನೆ ದೇವಲಯಗಳಷ್ಟೇ ಅಲ್ಲದೆ ಸೈನಿಕರ ಪ್ರಧಾನ ಆಕರ್ಷಣೆಯೂ ಆಗಿತ್ತು. ಆಂದ್ರದ ಒಂದು ಕಡೆ ತಿರುಪತಿ ತಿಮ್ಮಪ್ಪ, ಕರ್ನಾಟಕದ ಮೇಲುಕೋಟೆಯ ಚಲುವರಾಯ, ಶ್ರೀರಂಗಂ ಹಾಗೂ ಶ್ರೀರಂಗಪಟ್ಟಣದ ರಂಗನಾಥ ಕೇವಲ ಅಗ್ರಹಾರದವರ ಆರಾಧ್ಯ ದೈವಗಳಷ್ಟೇ ಆಗದೆ ಜನಸಾಮಾನ್ಯರ ದೈವವಾಗಿ ಸಮಾಜದ ಅಂಚಿನಲ್ಲಿ ನಿಂತವನನ್ನೂ ಸೆಳೆಯತೊಡಗಿದ್ದರು. ಅಷ್ಟೇ ಅಲ್ಲ ಈ ಸೆಳೆತವು ಗುಡ್ಡಗಾಡು ಜನರಾದ ಸೋಲಿಗರನ್ನು ಪ್ರಭಾವಿಸಿದ್ದು, ಬಿಳಿಗಿರಿರಂಗನ ಪ್ರೇಮ ಲೀಲೆಯ ಕಥೆಯ ಹುಟ್ಟು ನಮಗೆಲ್ಲಾ ತಿಳಿದ ವಿಚಾರವೇ ಆಗಿದೆ. ಬಾಣದ ರಂಗನಂತೂ ಬೇಡರ ಆರಾಧ್ಯ ದೈವನಾಗುತ್ತಾನೆ. ವಿಜಯನಗರದ ಅರಸರ ಸೈನ್ಯದಲ್ಲಿ ಹೆಚ್ಚಿನವರು ವೀರರು ತಿರುಪತಿಯ ತಿಮ್ಮಪ್ಪನ ಒಕ್ಕಲಾಗಿದ್ದರು. ಮೈಸೂರಿನ ವಡೆಯರ ಸೈನಿಕರು ರಂಗನ ಒಕ್ಕಲಾಗಿದ್ದರು. ಇದು ಒಂದರ್ಥದಲ್ಲಿ ಅವರನ್ನು ಬೆಸೆಯುವ ಒಂದು ಮಾರ್ಗವಾಗಿತ್ತು ಎಂಬುದು ನಿಜ. ಮೈಸೂರು ಅರಸ ಚಿಕ್ಕದೇವರಾಜ ವಡೆಯರ ತೀವ್ರವಾದ ಶ್ರೀವೈಷ್ಣವ ಪ್ರೇಮವು ಅವರ ಊಳಿಗದವರನ್ನು, ಸೈನ್ಯದ ವೀರಪಡೆಗಳನ್ನು ತೀವ್ರವಾಗಿ ಪ್ರಭಾವಿಸಿತ್ತೆಂಬುದು ನಮಗೆ ತಿಳಿದ ವಿಚಾರವೇ. ಕಡ್ಡಾಯವಾಗಿ ವೈಷ್ಣವಲಾಂಚನಗಳನ್ನು ಧರಿಸಿಯೇ ಅರಮನೆಯ ಆವರಣಕ್ಕೆ ಬರಬೇಕೆಂದು ಆಜ್ಞೆಮಾಡುವ ಮಟ್ಟಕ್ಕೂ ಅದು ಅತಿರೇಕಕ್ಕೆ ಹೋಗಿತ್ತೆಂದು ತಿಳಿದುಬರುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ಪ್ರತಿ ಊರಿಗೊಂದು ಹನುಂತನ ಗುಡಿ, ಗರಡಿಮನೆಗಳು ಎದ್ದು ನಿಂತವು. ಗುಡಿಗಳಂತೆ ಗರಡೀಮನೆಗಳು ರಕ್ಷಣೆಯ ಹೊಣೆಹೊತ್ತಿದ್ದವು. ಗರಡಿಗಳಲ್ಲಿ ಸಾಮುಮಾಡುತ್ತಿದ್ದವರಲ್ಲಿ ವಿಶೇಷವಾಗಿ ಬೇಡಜನಾಂಗದವರು ಹೆಚ್ಚೆಂಬುದು ತಿಳಿದುಬರುತ್ತದೆ. ಅವರೆಲ್ಲ ತಿರುಪತಿ ತಿಮ್ಮಪ್ಪನ, ಬಾಣದ ರಂಗನ ಒಕ್ಕಲುಗಳಾಗಿದ್ದು ಹಂಪಿಯ ರಥೋತ್ಸವದಲ್ಲಿ ಇಂದಿಗೂ ಅವರೇ ಮೊದಲು ರಥವನ್ನು ಎಳೆಯುವ ಗೌರವ ಪಡೆದಿದ್ದಾರೆ. ಕುಸ್ತಿಯಲ್ಲಿ ಗೆದ್ದ ಬೇಡನಾಯಕರಿಗೆ, ಜಟ್ಟಿಗಳಿಗೆ ಭೂಚಕ್ರದಕೊಡೆ, ನೀಲಿಕೊಡೆ, ಪಂಚವರ್ಣದ ಥಡಾಸುಗಳೊಂದಿಗೆ ಧವಳ ಶಂಖ ಹಾಗೂ ಚಕ್ರವನ್ನು ನೀಡಿ ಬಿರುದನ್ನು ಕೊಡುವ ಪದ್ದತಿ ಇದ್ದುದು ತಿಳಿದುಬರುತ್ತದೆ. ಸೈನಿಕರಲ್ಲಿ ಮುಕ್ಕಾಲುಪಾಲು ಅವರೇ ಹೆಚ್ಚು. ಬೇಡರ ದೊಡ್ಡ ಪಡೆಯು ಗರಡಿಯಮನೆಗಳಲ್ಲಿ ವಿಶೇಷವಾದ ವೈಷ್ಣವ ದೀಕ್ಷೆಯನ್ನು ಪಡೆಯುತ್ತಿತ್ತು. 'ಮಟ್ಟಿ ಆರಾಧನೆ'ಯಲ್ಲಿ ವೈಷ್ಣವ ಲಾಂಚನಗಳನ್ನು ಇಟ್ಟು ಇಂದಿಗೂ ಪೂಜಿಸುತ್ತಾರೆ. ತಿರುಪತಿಯ ರಥೋತ್ಸವದಲ್ಲಿ, ಮೇಲುಕೋಟೆಯಲ್ಲಿ ಅವರಿಗೆ ಆದ್ಯತೆಯಿದೆ. ಈ ರೀತಿ ಒಕ್ಕಲಾದ ಜನರ ಸಾಮರ್ಥ್ಯ ಒಂದು ಕಡೆ ಪ್ರಭುತ್ವಕ್ಕೆ ಬೇಕಿತ್ತು ಮತ್ತೊಂದು ಕಡೆ ಧರ್ಮಕ್ಕೂ ಬೇಕಿತ್ತು.

**ಬಿಲ್ಲ ಮುನ್ನೂರ್ವರ ಮೇಲೆ ಶೈವ-ವೈಷ್ಣವ ಧರ್ಮದ ಪ್ರಭಾವ**

ಬಿಲ್ಲು ವಿದ್ಯೆಯಲ್ಲಿ ನೈಪುಣ್ಯತೆಯನ್ನು ಪಡೆದ ಬಿಲ್ಲವರನ್ನು ಅನೇಕ ಶಾಸನಗಳು ಉಲ್ಲೇಖಿಸುತ್ತವೆ. ಅವರ ಬಿಲ್ಲುವಿದ್ಯೆಯ ನೈಪುಣ್ಯತೆಯಿಂದಾಗಿಯೇ ಈ ಬೇಡ ಜನಾಂಗದವರಿಗೆ ಆ ಹೆಸರು ಬಂದಿರಬೇಕು. ಶಿವಪುರದ ಶಾಸನವೊಂದು[೩೫] ಬಿಲ್ಲೇಶ್ವರ ಪಾದಾರಾದಕರಾದ ಇವರ ವರ್ಣನೆಯನ್ನು ವಿಶೇಷವಾಗಿ ಮಾಡಿದೆ. ಇವರಿಗೆ ಎಸುವರಾದಿತ್ಯರು, ಥೋಟಿ ವಿಳಾಸರು, ಸೈಕೋಲ ಭೈರವರು ಎಂಬ ಬಿರುದುಗಳಿವೆ. "ತಾವು ಬೇಡರು ಬೇಡಿದಗ್ಗೀವರುಂ ಕಾಡಾನೆ(ಮಲ್ಲ)ರುಂ ಅಡವಿಕಂದರ್ಪರು ಜವನಂ ಜಕುಲಿಸುವರುಂ ಜಲಬಲ್ಲಿತೆಂದಡೆ ಅಂಬಿಗರಾದರುಂ ನೆಲಬಲ್ಲಿತೆಂದಡೆ ಹೆಂಮಳಿರಾದರುಂ ಶ್ರೀಬಿಲ್ಲೇಶ್ವರ ದೇವರ ದಿವ್ಯ ಶ್ರೀಪಾದಪಾದ್ಮಾರಾಧಕರು" ಎಂಬ ಗದ್ಯ ಭಾಗದಲ್ಲಿ ಈ ಬೇಡ ಜನಾಂಗ ವಿವಿಧ ವೃತ್ತಿಗಳನ್ನು ಹಿಡಿದು, ನಾಡಿನಲ್ಲಿ ಕಾಡಿನಲ್ಲಿ ಜೀವಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಬಿಲ್ವಿದ್ಯೆಯಲ್ಲಿ ಪರಿಣತರಾದ ಇವರ ವೀರಪಡೆಗಳಿದ್ದು, ಅದನ್ನು ಬಿಲ್ಲಮುನ್ನೂರ್ವರೆಂದು ಶಾಸನಗಳಲ್ಲಿ ಕರೆದಿದೆ. ಅರಸರು ತಮ್ಮ ಯುದ್ಧಗಳಲ್ಲಿ ಇವರನ್ನು ಬಳಸಿಕೊಳ್ಳುತ್ತಿದ್ದರು. ವರ್ತಕರು ಇವರನ್ನು ರಕ್ಷಣೆಗೆ ನೇಮಿಸಿಕೊಳ್ಳುತ್ತಿದ್ದರು. ಹಿರಿಯೂರಿನ

ಶಾಸನದಲ್ಲಿ ಬಿಲ್ಲೇಶ್ವರ ದೇವಾಲಯಕ್ಕೆ ದಾನಬಿಟ್ಟ ವಿವರವಿದೆ.[೩೬] ಹಲಕೂರಿನ ಶಾಸನವೊಂದು ಗೌಡಿಕೆಯ ಪ್ರದಾನದ ಶಾಸನವೊಂದರಲ್ಲಿ ಈ ಬಿಲ್ಲ ಮುನೂರ್ವರನ್ನು ಜೇಡಗೊತ್ತಳಿ, ಹನ್ನೆರಡು ಹಿಟ್ಟಿನ ಬೆಸಮಕ್ಕಳೆಂದು ಕರೆದಿದೆ. ಆ ಶಾಸನದ ಒಪ್ಪದಲ್ಲಿ ಬಿಲ್ಲೇಶ್ವರವೆಂಬ ಒಪ್ಪವೂ ಇದೆ. [೩೭] ವರ್ತಕ ಸಮುದಾಯವು ನೀಡಿದ ಮಾನ್ಯದ ಶಾಸನದಲ್ಲಿ ಅವರ ಬೆಸಮಕ್ಕಳಾದ ಈ ಬಿಲ್ಲಮುನೂರ್ವರ ಒಪ್ಪವಿರುವುದು ಸಮಾಜದಲ್ಲಿ ಅವರಿಗಿದ್ದ ಗೌರವವನ್ನು ವ್ಯಕ್ತಪಡಿಸುತ್ತದೆ. ಒಟ್ಟಿನಲ್ಲಿ ವೀರರೂ ಕಷ್ಟಸಹಿಷ್ಣುಗಳೂ ಆದ ಈ ಬಿಲ್ಲಾಳುಗಳು ತಮ್ಮ ಧೈರ್ಯ ಬಿಲ್ಗಾರಿಕೆಯ ಜಾಣ್ಮೆಗೆ ಪ್ರಸಿದ್ಧರಾಗಿದ್ದರು.

ಕರ್ನಾಟಕದ ಅರಸರ ಸೈನ್ಯದಲ್ಲಿ ಬೇಡರು, ಬೇಟೆಗಾರರು, ಬಿಲ್ಲವ (ಬಿಲ್ಲಮನ್ನೂರ್ವರು ಹೆಚ್ಚು). ಸಮುದಾಯಗಳನ್ನು, ಗುಡ್ಡಗಾಡು ಜನಗಳನ್ನು ಶ್ರೀವೈಷ್ಣವ ಧರ್ಮ ವಿಶೇಷವಾಗಿ ಸೆಳೆದುಕೊಂಡಿತು. ಕುಮ್ಮಟ ದುರ್ಗದ ಕುಮಾರರಾಮನ ಕಾಲದಲ್ಲಿಯೂ ಬೇಡ ವೀರಪಡೆಗಳೊಂದಿಗೆ ಇತರ ವೀರರೂ ಸೇರಿ ಬೇಟೆಹಬ್ಬವನ್ನು ಆಚರಿಸುತ್ತಿದ್ದಂತೆ ತಿಳಿದುಬರುತ್ತದೆ. ವಿಜಯನಗರ ಕಾಲದಿಂದಲೂ ಮಹಾ ಯಾತ್ರಾಸ್ಥಳ, ಶ್ರೀವೈಷ್ಣವ ಧರ್ಮದ ಪ್ರಧಾನ ನೆಲೆಯಾದ ತಿರುಪತಿಯಲ್ಲಿ 'ಬೇಟೆಹಬ್ಬ'ದ ಬೇಟೆಯ ನೃತ್ಯ ವಿಶೇಷವಾಗಿ ನಡೆಯುತ್ತಿತ್ತು. ಈ ಹಬ್ಬವನ್ನು ಬ್ರಹ್ಮೋತ್ಸವ ಆದ ಮೇಲೆ ಎರಡು ದಿನ. ದೀಪಾವಳಿಯಲ್ಲಿ ಒಂದುದಿನ, ಕಾರ್ತಿಕ ಹಬ್ಬದಲ್ಲಿ ಒಂದು ದಿನ ಮಾಡುವ ಪದ್ಧತಿಯಿದೆ. ಈ ಬೇಟೆ ಹಬ್ಬಕ್ಕೆ ಅಗತ್ಯವಾದ ಹಣ್ಣು, ಕಬ್ಬು, ಬೆಲ್ಲ, ತೆಂಗಿನಕಾಯಿ, ಎಲೆ–ಅಡಕೆ ಹೂಪತ್ರೆ ಮೊದಲಾದುವನ್ನು ಭಕ್ತಾದಿಗಳು ನೀಡುತ್ತಿದ್ದುದಕ್ಕೆ ಉದಾಹರಣೆಗಳಿವೆ. ಬೇಟೆಯದಿನ ಶ್ರಿ ವೆಂಕಟನಾಥನನ್ನು ಬೇಟೆಗಾಗಿ ಹೊರಗೆ ಆಹ್ವಾನಿಸುತ್ತಾರೆ. ಬೇಸಿಗೆ ಅಥವಾ ಸುಗ್ಗಿಯ ಹಬ್ಬದಂತೆ ಬೇಟೆಹಬ್ಬವನ್ನು ತಿರುಪತಿ ಗೋವಿಂದರಾಜನ ಹೆಸರಿನಲ್ಲಿ ಬೆಳಗಿನಿಂದಲೇ ಆಚರಿಸುತ್ತಾರೆ. ಅಗತ್ಯವಾದ ಅಕ್ಕಿ, ಹಣ್ಣು–ಕಾಯಿ, ತುಪ್ಪ ಕಬ್ಬು, ಎಲೆ ಮೆಣಸು ಯಾಲಕ್ಕಿ ಲವಂಗ ಇತ್ಯಾದಿಗಳನ್ನು ಹಂಚಲಾಗುತ್ತದೆ. ತೆಲುಗುನಾಡಿನಲ್ಲಿ ಬೇಡರು ತಿಮ್ಮಪ್ಪನಿಗಾಗಿ ಆಚರಿಸುವ ಈ ಹಬ್ಬವನ್ನು 'ಪಾಡಿಯವಟ್ರೈ' ಎಂದು ಕರೆಯುತ್ತಾರೆ.

ವಿಜಯನಗರದ ಕೇಂದ್ರವಾದ ಹಂಪೆಯಲ್ಲಿ ಹಾಗೂ ಇತರ ಪ್ರದೇಶಗಳಲ್ಲಿ 'ಅಡವಿ ಚೆಂಚರು ಬುಡಕಟ್ಟು' ಜನರು ಬೇಟೆ ದಿಬ್ಬವನ್ನು 'ವೆಂಕಟಗಿರಿಪುರ' ಎಂದು ಕರೆದು ಒಂದು ದಿನ ತಿರುಪತಿಯಲ್ಲಿ ನಡೆಯುವ ರೀತಿಯಲ್ಲಿಯೆ ಬೇಟೆಹಬ್ಬವನ್ನು ಆಚರಿಸಿಕೊಂಡು ಬಂದಿದಾರೆ. (ಹಂಪೆಯ ಬೇಟೆಗಾರರ ಹೆಬ್ಬಾಗಿಲು ಬಳಿ ತಿರುಪತಿ ಗುಡ್ಡವಿದ್ದು ಇಲ್ಲಿ ಸಾಂಕೇತಿಕವಾಗಿ ಬೇಟೆಹಬ್ಬವನ್ನು ಮಾಡುತ್ತಿದ್ದರಂತೆ).ಈಗ ಯುಗಾದಿಯ ಅಮವಾಸ್ಯೆ ದಿನ ಕಮಲಾಪುರ ಇತರಗ್ರಾಮದ ಬೇಡರು (ಆನೆಗೊಂದಿ ರಾಜರ ಅನುಮತಿ ಮೇರೆಗೆ) ಬೇಟೆಗೆಹೋಗುತ್ತಾರೆ.[೩೮] ಪಾಳೆಗಾರರ ಕಾಲದಲ್ಲೂ ಈ ಜಟ್ಟಿಗಳ ಅಖಾಡಗಳಾದ ಗರಡಿ ಮನೆಗಳ ವೈಷ್ಣವ ಪೂಜೆ, ಬ್ಯಾಟರಾಯನ ಹಬ್ಬಗಳ ಆಚರಣೆಯ ಮೂಲಕ ಹೋರಾಟದ ಪಡೆಗಳನ್ನು ಮನ್ನಿಸುತ್ತಿದ್ದುದು, ಹಾಗೂ ಆಯುಧ ಪೂಜೆಯಲ್ಲಿ ವೀರರಿಗೆ ವಿಶೇಷಮನ್ನಣೆ ನೀಡಿದ್ದುದು ಗಮನಾರ್ಹ.

ಒಂದು ಹೋರಾಟದ ಸಮುದಾಯವನ್ನು ಪ್ರಭುತ್ವ ಮತ್ತು ಧರ್ಮ ಒಳಗೊಳ್ಳುವ ಪರಿಯನ್ನು ಇಲ್ಲಿ ಗಮನಿಸಬೇಕು. ಬೇಡರಂತಹ ಹೋರಾಟದ ಅನೇಕ ಸಮುದಾಯದ ಸಾಮರ್ಥ್ಯವನ್ನು ವಿಶೇಷವಾಗಿ ಗುರುತಿಸಿ ಪ್ರಭುತ್ವ ರಾಜ್ಯದ ಸಂರಕ್ಷಣೆಗೆ ಅವರನ್ನು ಗಟ್ಟಿಯಾಗಿ ಅವಲಂಬಿಸಿತ್ತು. ಅವರಿಗೆ ಹೀಗೆ ಧಾರ್ಮಿಕ ಮನ್ನಣೆ ನೀಡುವುದರ ಮೂಲಕ ವೈಷ್ಣವಧರ್ಮ ಪ್ರಭತ್ವದೊಂದಿಗೆ ಕೈಜೋಡಿಸಿತ್ತು.

**ಟಿಪ್ಪಣಿ**

1. ಎ.ಕ ಪರಿಷ್ಕೃತ. ೧೧. ನರಸಿಂಹರಾಜಪುರ ಶಾ.ಸಂ.೫,೬,೭. ಚಿಕ್ಕಮಗಳೂರು ಜಿಲ್ಲೆ. ಕ್ರಿ ಶ ೮ನೇ ಶತಮಾನ. [ಕೋಶಿಗರ್ ಎಳ್ಪತ್ತರ್, ಇತಿಹಾಸ ದರ್ಶನ ಸಂಪುಟ ೨೭.
2. ಎ.ಕ ೯(ಪರಿ) ಶಾ.ಸಂ. ಹಳೆಬೀಡು, ಅಗ್ರಹಾರ ಬಾಚಹಳ್ಳಿಯ ಶಾಸನಗಳು ಎ.ಕ.(ಪರಿ) ೬ ಶಾ.ಸಂ. ೭೮,೭೯,೮೨,೮೪
3. ಮೋಳಿಗೆ ಮಾರಯ್ಯನ ವಚನಗಳು.ಸಂಕೀರ್ಣ ವಚನ ಸಂಪುಟ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ,೧೯೯೩.
4. ಎ.ಕ.೭(ರೈಸ್) ಚೆನ್ನಗಿರಿ, ಶಾ.ಸಂಖ್ಯೆ. ೩೨ ಕಗ್ಗತ್ತೂರು.
5. ಬಸವಣ್ಣನವರ ವಚನಗಳು (ಸಂ) ಡಾ.ಎಂ.ಎಂ.ಕಲಬುರ್ಗಿ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ,೧೯೯೩.
6. ಮಹಾದೇವಿಯಕ್ಕನ ಪುರಾಣ, ಚೆನ್ನಬಸವಾಂಕ ಕ್ರಿ.ಶ. ೧೫೫೦.
7. ಅಮಲ ಬಸವರಾಜ ಚಾರಿತ್ರ ಕ್ರಿ.ಶ.೧೫೦೦.(ಸಂ).ಎಚ್ ದೇವೀರಪ್ಪ, ಕನ್ನಡ ಅಧ್ಯಯನ ಸಂಸ್ಥೆ,ಮೈ.ವಿ.ವಿ ೧೯೭೦ ದ್ವಿತೀಯ ಮುದ್ರಣ.
8. ೭.ಸಂಪೂರ್ಣವಾಗಿ ಭಗವಂತನಲ್ಲಿ ಶರಣಾಗುವುದರಿಂದ
9. ೮.ಎ.ಕ.೯(ಪರಿ) ಬೇಲೂರು ಶಾ.ಸಂ.೪೧೦
10. ೯.ಎ.ಕ.೧೦(ಪರಿ) ಅ.ಕೆ ಶಾ.ಸಂ.೧೮೧, ತಳತೊರೆ, ಕ್ರಿ.ಶ.೧೨೭೮
11. ಎ.ಕ ೧೦(ಪರಿ) ಶಾ.ಸಂ.೧೭೮, ತಳತೊರೆ, ಕ್ರಿ.ಶ.೧೨–೧೩ನೇ ಶತಮಾನ
12. ಅದೇ, ಶಾ.ಸಂ.೫೦, ಬೆಂಡೆಕೆರೆ, ಕ್ರಿ.ಶ.೧೬–೧೭ನೇ ಶತಮಾನ
13. ಶೆಟ್ಟರ್ ಎಸ್.ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ.ಸಂ.೩,ಪು.೨೭
14. ಎ.ಕ ೧೦(ಪರಿ) ಶಾ.ಸಂ೧೬೧,ತಳಲೂರು.ಕ್ರಿ.ಶ.೧೯೯೧
15. ಅದೇ. ಶಾ.ಸಂಖ್ಯೆ ೮೯, ಕಣಕಟ್ಟೆ, ಕ್ರಿ.೧೨೭೪
16. ಶ್ಲೋಕ : "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚಯಾಚತೆ; ಅಭಯಂ ಸರ್ವಭೂತೇಭ್ಯೋ ಪರಮೇತದ್ವತಂ ಮಮ" ಶ್ರೀರಾಮನ ಮಾತು, ರಾಮಾಯಣ. "ಸರ್ವಧರ್ಮಾನ್ ಪರತ್ಯಜ್ಯ ಮಾಮೇಕಂ ಶರಣಂ ವ್ರಜ; ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷಾಮಿಮಾಶುಚಃ"– ಶ್ರೀ ಕೃಷ್ಣ, ಭಗವದ್ಗೀತ
17. ತಪ : ಅಥವಾ ತಾಪ– ಇದು ಶಂಖ ಚಕ್ರಗಳ ಕಾದ ಮುದ್ರೆಯನ್ನು ಭುಜಗಳ ಮೇಲೆ ಒತ್ತುವುದು. ಇದಕ್ಕೆ 'ಸಮಾಶ್ರಯಾ' ಎಂಬ ಹೆಸರೂ ಇದೆ. ಪುಂಡ್ರ –ಶ್ರೀ ವೈಷ್ಣವ ಪಂಥದ ಲಾಂಚನವಾದ ನಾಮಧಾರಣೆ; ನಾಮ –ವಿಷ್ಣುವಿನ ಹೆಸರನ್ನು ಇಟ್ಟುಕೊಳ್ಳುವುದು, ಕೇಶವ, ಚೆಲುವ, ರಂಗ ಇತ್ಯಾದಿ
18. ವಿಷ್ಣುವಿಗೆ ಸಂಬಂಧಿಸಿದ ಮೂರು ವಿಧದ ಮಂತ್ರಗಳನ್ನು 'ರಹಸ್ಯತ್ರಯಮಂತ್ರ' ಎನ್ನುತ್ತಾರೆ.೧. "ಓಂ ನಮೋ ನಾರಾಯಣಾಯ' ೨) "ಶ್ರೀ ಮನ್ನಾರಾಯಣ ಚರಣೌ ಶರಣಂ ಪ್ರಪದ್ಯೇ ಶ್ರೀಮತೇ ನಾರಾಯಣಾಯ"
   ೩) "ಸರ್ವ ಧರ್ಮಾನ್ ಪರಿತ್ಯಜ್ಯಮಾಮೇಕಂ ಶರಣಂ ವ್ರಜ; ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷಾಮಿಮಾಶುಚಃ"ಎಂಬ ಭಗವದ್ಗೀತೆಯ ಶ್ಲೋಕ; ಯಜ್ಞ: ವಿಷ್ಣುವಿನ ಪೂಜೆ ಆರಾಧನೆ.
19. ಎಪಿಗ್ರಾಫಿಯಾ ಕರ್ನಾಟಿಕ ೬ ನಾಗಮಂಗಲ ಶಾ. ಸಂಖ್ಯೆ

೮೪ ಕ್ರಿ. ಸು. ೧೨೫೬ ಅಗ್ರಹಾರ ಬಾಚಹಳ್ಳಿ
20. ಎ.ಕ. ೧೦. ಪರಿಷ್ಕೃತ ಚ.ಪ. ಶಾ.ಸಂ ೬೩ ಕ್ರಿ. ಶ. ೧೧೯೬, ಕ್ರಿ. ೧೨೧೮]
21. ಎ.ಕ.೧೦ ಪರಿಷ್ಕೃತ ಶಾ. ಸಂಖ್ಯೆ.೨೪೬,ಅರಸೀಕೆರೆ
22. ದಿ ಕಲ್ಚರಲ್ ಹೆರಿಟೇಜ್ ಆಫ್ ಇಂಡಿಯ ೨, ಪು.೯೧; ರಾಮಾನುಜ. ಎಚ್ಚಸ್ಕೆ ೧೯೯೮.ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು
23. ಎ.ಕ.೧೦(ಪರಿ) ಚನ್ನರಾಯಪಟ್ಟಣ ಶಾ.ಸಂ.೮೩, ೭೦ ಕ್ರಿ.ಶ.೧೨–೧೩ನೇ ಶತಮಾನ.
24. ಎ.ಕ.೧೦(ಪರಿ)ಅರಸೀಕೆರೆ ಶಾ.ಸಂ. ૩೧೨, ಕೋಳಿಗುಂದ ಕ್ರಿ.ಶ.೧೦೮೩
25. ಎ.ಕ.೬ (ಪರಿ) ಶಾ.ಸಂ.೨೭ ಕಿಕ್ಕೇರಿ ಕೃಷ್ಣರಾಜಪೇಟೆ.ಕ್ರಿ. ಶ. ೧೧೭೧ ಕ್ರಿ. ಶ. ೧೩೦೫ರ
26. ಎ.ಕ. (ಪರಿ) ೭ ಶ. ಸಂ. ೧೩ ಮರಡಿಪುರ ಮಂಡ್ಯ.ಕ್ರಿ. ಶ. ೧೩೦೫.
27. ಶರಣ.ಸಾಹಿತ್ಯ.೨೧–೨ ಮತ್ತು ೩ ಕ್ರಿ.ಶ. ೧೪೭೪
28. ಚನ್ನಬಸವಪುರಾಣ ೬೩–೫೪೦
29. ವೀರಶೈವಪಾರಿಭಾಷಿಕಪದಕೋಶ. (ಸಂ) ಎಸ್ ವಿದ್ಯಾಶಂಕರ್, ಬಸವ ಸಮಿತಿ–೨೦೦೦
30. ಚೆನ್ನಬ. ಸಮವ.೩–೩೨೨–೯೮೭
31. ಎ.ಕ.೭. (ಪರಿ)ಶಾ.ಸಂ. ೩೪ರಾಯಸೆಟ್ಟಿಪುರ ಕ್ರ.ಶ. ೧೨೫೧ ಮಂಡ್ಯ)
32. ಅಲ್ಲಮನ ವಚನ ಚಂದ್ರಿಕೆ ೧೦೪–೪೭೦ ಎಂಬ ಅಲ್ಲಮನ ಮಾತು
33. ದಾ.ಸೋ.ಸಂಪುಟ.೩೬
34. ವೀರಶೈವಪುರಾಣ ೮–೧೨೮–೧೩
35. ಶರೀಫ–೭೦ ಕವಿಕಾವ್ಯ ಪರಿಚಯ
36. ಎ.ಕ. ೧೦ (ಪರಿ)ಚನ್ನರಾಯಪಟ್ಟಣ,ಶಾ.ಸಂಖ್ಯೆ.೧೨೯.ಕ್ರಿ.ಶ.೧೨೫೯
37. ಅದೇ. ಶಾಸನ ಸಂಖ್ಯೆ ೩೧೭ ಹಿರಿಯೂರು, ಕ್ರಿ.ಶ.೧೨೫೪
38. ಅದೇ.ಶಾ.ಸಂಖ್ಯೆ. ೯೭, ಹಲಕೂರು. ಕ್ರಿ.ಶ. ಸು.೧೨ನೇ ಶತಮಾನ
39. ಕಾರ್ತೀಕ ಹಬ್ಬದ ನಂತರ ಯುಗಾದಿಯ ಹಿಂದಿನದಿನ ಅಥವಾ ಯುಗಾದಿಯಂದೇ ಬೇಟೆಗೆ ಹೋಗುವ ಪದ್ಧತಿಯ ಆಚರಣೆಯೂ ಇದೆ [ವಿರುಪಾಕ್ಷಿ ಪೂಜಾರಹಳ್ಳಿ ಹಂಪೆಯ ಸಂಪುಟ ಕಲೆ, ಕ್ರೀಡೆ ಮತ್ತು ಕೌಶಲ್ಯ. ಪುಟ ೧೯೯–೨೦೨ ಕನ್ನಡ ವಿಶ್ವವಿದ್ಯಾಲಯ ಹಂಪಿ].